# ಅಧ್ಯಾಯ – II

## 2. ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

ಈ ಅಧ್ಯಾಯವು ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ವ್ಯವಹರಿಸುತ್ತದೆ. ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಪೂರ್ವಭಾವಿ ಯೋಜನೆಯ ತಯಾರಿಕೆ, ಹೂಡಿಕೆಗಳು ಹಾಗೂ ಗುತ್ತಿಗೆ ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಿಂದ ಹೊರಬಂದಂತಹ ಪ್ರಮುಖ ಅಂಶಗಳನ್ನು ಈ ಅಧ್ಯಾಯದಲ್ಲಿ ಸೇರಿಸಲಾಗಿರುವುದು.

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತ**

### *2.1. ಉದ್ದೇಶಿತ ಗುರಿಯನ್ನು ಸಾಧಿಸದಿರುವುದು*

**ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಸ್ಥಾವರದಲ್ಲಿ ₹ 118.46 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದಂತಹ ವಸತಿ ಗೃಹಗಳಲ್ಲಿ ಉದ್ಯೋಗಿಗಳು ನೆಲೆಸದಿದ್ದ ಕಾರಣ ಗುರಿಯಾಗಿಸಿಕೊಳ್ಳಲಾಗಿದ್ದ ಉದ್ದೇಶವು ಈಡೇರಲಿಲ್ಲ**

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕಂಪನಿ) ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ[123] (ಬಿಟಿಪಿಎಸ್) ಮೂರು ವಿದ್ಯುತ್ ಉತ್ಪಾದನಾ ಘಟಕಗಳನ್ನು (1,700 ಮೆವ್ಯಾ[124]ಸಾಮರ್ಥ್ಯ) ಹೊಂದಿದ್ದು, ಸ್ಥಾವರದಿಂದ 25 ಕಿಲೋ ಮೀಟರುಗಳ ದೂರದ ಬಳ್ಳಾರಿ ನಗರದಲ್ಲಿ ವಾಸಿಸುತ್ತಿದ್ದಂತಹ ತನ್ನ ಉದ್ಯೋಗಿಗಳಿಗೆ ವಸತಿ ಗೃಹ ಒದಗಿಸುವ ಸಲುವಾಗಿ ವಿದ್ಯುತ್ ಸ್ಥಾವರದ ಸಮೀಪ ಒಂದು ಪ್ರಸ್ತಾಪಿಸಲಾದಂತಹ ಪೂರ್ಣಪ್ರಮಾಣದ ಎಲ್ಲಾ ಅನುಕೂಲತೆಗಳು ಇರುವಂತಹ ಟೌನ್‌ಶಿಪ್‌ನಲ್ಲಿ[125] ತನ್ನ ಉದ್ಯೋಗಿಗಳಿಗಾಗಿ ವಸತಿ ಗೃಹಗಳನ್ನು ನಿರ್ಮಿಸಲು ತೀರ್ಮಾನಿಸಿತು (ಜನವರಿ 2010).

ಜುಲೈ 2010/ಸೆಪ್ಟಂಬರ್ 2011ರಲ್ಲಿ ಕೈಗೆತ್ತಿಕೊಳ್ಳಲಾದಂತಹ ನಿರ್ಮಾಣವು ಮೇ 2016/ಮೇ 2017ರಲ್ಲಿ ₹ 118.46 ಕೋಟಿ ಒಟ್ಟಾರೆ ವೆಚ್ಚದಲ್ಲಿ ಪೂರ್ಣಗೊಂಡಿತು. ವಸತಿಗೃಹಗಳು ವಾಸಿಸಲು ಮೇ 2017ರಲ್ಲಿ ಸಿದ್ಧಗೊಂಡಿದ್ದವು. ವಸತಿಗೃಹಗಳನ್ನು ಉದ್ಯೋಗಿಗಳಿಗೆ ಅಕ್ಟೋಬರ್ 2017ರಿಂದ ಹಂಚಿಕೆ ಮಾಡಲು ಕಂಪನಿಯ ನಿರ್ದೇಶಕರುಗಳ ಮಂಡಳಿಯು ಅನುಮೋದಿಸಿತು (ಸೆಪ್ಟೆಂಬರ್ 2017). ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪನೆಯ ಪ್ರಾರಂಭಿಕ ಹಂತಗಳಲ್ಲಿ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ ಕೆಲಸ ಮಾಡುವ ಆಯ್ಕೆಯನ್ನು ಉದ್ಯೋಗಿಗಳು ಮಾಡಲು ಪ್ರೋತ್ಸಾಹಿಸುವ ಸಲುವಾಗಿ ನೀಡಲಾಗಿದ್ದಂತಹ ಕೆಲವು ವಿಶೇಷ ಭತ್ಯೆಗಳನ್ನು[126] ಸ್ಥಗಿತಗೊಳಿಸುವುದಕ್ಕೂ ಕೂಡ ನಿರ್ದೇಶಕರುಗಳ ಮಂಡಳಿಯು ಅನುಮೋದನೆ ನೀಡಿತು. ಆದಾಗ್ಯೂ, ಉದ್ಯೋಗಿಗಳು ವಸತಿಗೃಹಗಳು ವಿದ್ಯುತ್

[123] ಬಳ್ಳಾರಿ ಪಟ್ಟಣದಿಂದ 25 ಕಿಲೋಮೀಟರುಗಳ ದೂರದಲ್ಲಿರುವ ಬಳ್ಳಾರಿ ಜಿಲ್ಲೆಯ ಕುಡತಿನಿ ಗ್ರಾಮದಲ್ಲಿದೆ.

[124] ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಸ್ಥಾವರವು ಅಕ್ಟೋಬರ್ 2007/ಜನವರಿ 2012 ಹಾಗೂ ಸೆಪ್ಟಂಬರ್ 2016ರಲ್ಲಿ ಕಾರ್ಯೋದ್ಯುಕ್ತಗೊಳಿಸಲಾಗಿದ್ದು ಅನುಕ್ರಮವಾಗಿ 2x500 ಮೆವ್ಯಾ ಹಾಗೂ 1x700 ಮೆವ್ಯಾ ಸಾಮರ್ಥ್ಯದ ಮೂರು ಘಟಕಗಳನ್ನು ಹೊಂದಿದೆ.

[125] 594 ವಸತಿಗೃಹಗಳು (ಎ2 ಮಾದರಿ ವಸತಿ ಕಟ್ಟಡಗಳ 18 ವಸತಿ ಸಮುಚ್ಚಯಗಳು, ಬಿ ಮಾದರಿಯ 12 ಬ್ಲಾಕುಗಳು ಹಾಗೂ ಸಿ ಮಾದರಿಯ 12 ಬ್ಲಾಕುಗಳ ವಸತಿಗೃಹಗಳನ್ನು ಹೊಂದಿದೆ ಪ್ರತಿಯೊಂದು ಬ್ಲಾಕು 24 ವಸತಿಸಮುಚ್ಚಯಗಳನ್ನು ಒಳಗೊಂಡಿರುತ್ತದೆ. ಅಲ್ಲದೆ ವಿಐಪಿ ಅತಿಥಿ ಗೃಹ (12 ಮನೆಗಳು), ಕಾರ್ಪೊರೇಟ್ ಅತಿಥಿ ಗೃಹ (24 ಕೋಣೆಗಳು) ಹಾಗೂ ನಾನ್ ಕಾರ್ಪೊರೇಟ್ ಅತಿಥಿ ಗೃಹ (24 ಕೋಣೆಗಳು)ಗಳನ್ನು ಹೊಂದಿದೆ.

[126] ಬೆಂಗಳೂರು ನಗರಕ್ಕೆ ಅನ್ವಯಗೊಳ್ಳುವ ಗೃಹ ಬಾಡಿಗೆ ಭತ್ಯೆ, ತಿಂಗಳು ಒಂದಕ್ಕೆ ₹ 3,000 ವಿಶೇಷ ಪ್ಯಾಕೇಜು ಹಾಗೂ ಉಚಿತ ಸಾರಿಗೆ ಅನುಕೂಲತೆ.

ಸ್ಥಾವರಕ್ಕೆ ಅತೀ ಸಮೀಪದಲ್ಲಿರುವ ಹಾಗೂ ಮನುಷ್ಯರು ವಾಸಿಸಲು ಸೂಕ್ತವಾಗಿರುವುದಿಲ್ಲ ಹಾಗೂ ಶೈಕ್ಷಣಿಕ, ಆರೋಗ್ಯ, ಅನುಕೂಲಗಳ ಅಲಭ್ಯತೆಯ ಕಾರಣಗಳಿಂದಾಗಿ ಈ ವಸತಿಗೃಹಗಳಲ್ಲಿ ವಾಸಿಸಲು ನಿರಾಕರಿಸಿದರು (ಫೆಬ್ರವರಿ 2018). ಉದ್ಯೋಗಿಗಳು ಈ ವಸತಿಗೃಹಗಳಲ್ಲಿ ವಾಸಿಸಲು ನಿರಾಕರಿಸಿದ್ದರ ತತ್ಪರಿಣಾಮವಾಗಿ, ಉದ್ಯೋಗಿಗಳ ಸಂಘಗಳಿಂದ ಸ್ವೀಕರಿಸಲಾದ ಮನವಿಗಳ ಆಧಾರದ ಮೇರೆಗೆ ಉಚಿತ ಸಾರಿಗೆ ಅನುಕೂಲತೆ ಹಾಗೂ ವಿಶೇಷ ಪ್ಯಾಕೇಜುಗಳನ್ನು[127] ಸ್ಥಗಿತಗೊಳಿಸಲು ತಾನು ಈ ಮೊದಲು ತೆಗೆದುಕೊಂಡಿದ್ದ ತೀರ್ಮಾನವನ್ನು ಕಂಪನಿಯು ಹಿಂಪಡೆದುಕೊಂಡಿತು. ಕಂಪನಿಯು ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಸಮೀಪವೇ ತನ್ನ ಅಂತರ್ಗತ ಉಕ್ಕು ಸ್ಥಾವರವನ್ನು ಹೊಂದಿದ್ದಂತಹ ಜಿಂದಾಲ್ ಸ್ಟೀಲ್ ವರ್ಕ್ಸ್ ನಿಯಮಿತಕ್ಕೆ ಈ ವಸತಿಗೃಹಗಳನ್ನು ತಿಂಗಳು ಒಂದಕ್ಕೆ ₹38.54 ಲಕ್ಷ ಗುತ್ತಿಗೆ ಬಾಡಿಗೆಯ ಆಧಾರದ ಮೇರೆಗೆ ಗುತ್ತಿಗೆಗೆ ನೀಡಿತು (ಸೆಪ್ಟೆಂಬರ್ 2020).

ಈ ಸಂಬಂಧವಾಗಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು (ಮಾರ್ಚ್ 2019/ಜನವರಿ 2021):

i. ಕಂಪನಿಯು ವಸತಿಗೃಹ ನಿರ್ಮಿಸುವ ತೀರ್ಮಾನವನ್ನು ತೆಗೆದುಕೊಳ್ಳುವ ವೇಳೆಯಲ್ಲಿ (ಜನವರಿ 2010)ಮಕ್ಕಳಿಗೆ ಶೈಕ್ಷಣಿಕ ಅನುಕೂಲತೆಗಳ ಕೊರತೆ, ಗಾಳಿ ಹಾಗೂ ಶಬ್ದ ಮಾಲಿನ್ಯದ ಕಾರಣ ಆರೋಗ್ಯದ ಸಮಸ್ಯೆ, ಸುರಕ್ಷತೆ/ಸುಭದ್ರತೆಯ ಸಮಸ್ಯೆಗಳು, ಮುಂತಾದ ಕಾರಣಗಳನ್ನು ನೀಡಿ ವಿದ್ಯುತ್ ಸ್ಥಾವರಕ್ಕೆ ಅತೀ ಸಮೀಪವಾಗಿ ವಸತಿಗೃಹ ನಿರ್ಮಾಣಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಉದ್ಯೋಗಿಗಳ ಸಂಘಗಳು[128] ನೀಡಿದ್ದಂತಹ ಮನವಿಗಳನ್ನು (ಜನವರಿ 2009 ಮತ್ತು ಜೂನ್ 2009) ನಿರ್ದೇಶಕರುಗಳ ಮಂಡಳಿಯು ಪರ್ಯಾಲೋಚಿಸಲಿಲ್ಲ. ಆದಾಗ್ಯೂ, ಈ ಸಮಸ್ಯೆಗಳ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ತದನಂತರದಲ್ಲಿ ನಡೆದಂತಹ (ಏಪ್ರಿಲ್ 2010) ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ವಿದ್ಯುತ್ ಸ್ಥಾವರದ ಕಾರ್ಯಾಚರಣೆಗೆ ಉದ್ಯೋಗಿಗಳು ಶಾಖೋತ್ಪನ್ನ ವಿದ್ಯುತ್ ಸ್ಥಾವರಕ್ಕೆ ಸಮೀಪವಾಗಿ ವಾಸಿಸುವುದು ಅತ್ಯಂತ ಅಗತ್ಯವಾಗಿರುತ್ತದೆ ಎಂಬುದಾಗಿ ಸಂಘಗಳಿಗೆ ತಿಳಿಸಲಾಯಿತು. ಅಲ್ಲದೆಯೇ ವಸತಿಗೃಹಗಳಿಗಾಗಿ ಆಯ್ಕೆ ಮಾಡಲಾಗಿರುವ ಸ್ಥಳವು ವಾಸಿಸಲು ಯೋಗ್ಯವಾಗಿರುತ್ತದೆ ಎಂಬುದಾಗಿಯೂ ತಿಳಿಸಲಾಯಿತು.

ii. ವಸತಿಗೃಹ ಪೂರ್ಣಗೊಂಡನಂತರವೂ, ಉದ್ಯೋಗಿಗಳು ಈ ಮೊದಲು ವಸತಿಗೃಹ ಪ್ರಸ್ತಾವನೆಯ ಹಂತದಲ್ಲಿ ನೀಡಿದ್ದಂತಹ ಕಾರಣಗಳ (ಮಕ್ಕಳಿಗೆ ಶೈಕ್ಷಣಿಕ ಅನುಕೂಲತೆಗಳ ಕೊರತೆ, ಗಾಳಿ ಹಾಗೂ ಶಬ್ದ ಮಾಲಿನ್ಯದ ಕಾರಣ ಆರೋಗ್ಯದ ಸಮಸ್ಯೆ, ಸುರಕ್ಷತೆ ಸಮಸ್ಯೆಗಳು) ಮೇರೆಗೆ ವಸತಿಗೃಹದಲ್ಲಿ ವಾಸಿಸಲು ನಿರಾಕರಿಸಿದರು (ಫೆಬ್ರವರಿ 2018). ಅದು ಒಂದು ಅತ್ಯಂತ ಅತ್ಯಗತ್ಯ ವಿಷಯವಾಗಿದೆ ಎಂಬುದಾಗಿ ತಿಳಿಸಿ ವಸತಿಗೃಹ ನಿರ್ಮಿಸಲು ತೀರ್ಮಾನವನ್ನು ತೆಗೆದುಕೊಂಡ ಕಂಪನಿಯು ಉದ್ಯೋಗಿಗಳ ಕಳವಳವನ್ನು ನೀಗಿಸುವಲ್ಲಿ ಹಾಗೂ ₹ 118.46 ಕೋಟಿ ಮೊತ್ತದಷ್ಟು ಗಮನಾರ್ಹವಾದಂತಹ ಬಂಡವಾಳ ಹೂಡಿಕೆಯೊಂದಿಗೆ ನಿರ್ಮಿಸಲಾದ ವಸತಿಗೃಹದಲ್ಲಿ ವಾಸಿಸುವಂತೆ ಅವರುಗಳ ಮನ ಒಲಿಸುವಲ್ಲಿ ವಿಫಲಗೊಂಡಿತು. ಮುಂದುವರೆದು, ಕಂಪನಿಯು, ವಸತಿಗೃಹ ಲಭ್ಯತೆಯ ಹೊರತಾಗಿಯೂ ಉಚಿತ ಸಾರಿಗೆ ಮತ್ತು ಮನೆ ಬಾಡಿಗೆ ಭತ್ಯೆಯ ಮೇಲೆ ವರ್ಷ ಒಂದಕ್ಕೆ ₹ 7.20 ಕೋಟಿ[129] ಮೊತ್ತದಷ್ಟು ವೆಚ್ಚವನ್ನು ಭರಿಸುವುದನ್ನು ಮುಂದುವರೆಸಿಕೊಂಡು ಹೋಯಿತು.

---

[127] ಕಂಪನಿಯು ಫೆಬ್ರವರಿ 2020ರಿಂದ ಜಾರಿಗೆ ಬಂದಂತೆ ವಿಶೇಷ ಪ್ಯಾಕೇಜನ್ನು ತಿಂಗಳು ಒಂದಕ್ಕೆ ₹ 770ರಂತೆ ಕಡಿಮೆಗೊಳಿಸಿದ ದರದಲ್ಲಿ ಪಾವತಿಸಲು ತೀರ್ಮಾನಿಸಿತು.

[128] ಕೆಪಿಸಿ ಪದವೀದರ ಇಂಜಿನಿಯರುಗಳ ಸಂಘ, ಕೆಪಿಸಿ ಮೆಕ್ಯಾನಿಕಲ್ ಇಂಜಿನಿಯರುಗಳ ಸಂಘ ಹಾಗೂ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಸ್ಥಾವರ ವಲಯದ ಕೆಪಿಸಿ ಡಿಪ್ಲೊಮಾ ಇಂಜಿನಿಯರುಗಳ ಸಂಘ.

[129] 2017–19ರಲ್ಲಿ ಉದ್ಯೋಗಿಗಳಿಗೆ ಪಾವತಿಸಲಾಗಿರುವ ಮೊತ್ತದ ಆಧಾರದ ಮೇರೆಗೆ ಲೆಕ್ಕಹಾಕಲಾದ ₹ 2.83 ಕೋಟಿ ಮೊತ್ತದಷ್ಟು ಗೃಹ ಬಾಡಿಗೆ ಭತ್ಯೆ ಹಾಗೂ 2019–20ರಲ್ಲಿ ಪಾವತಿಸಲಾಗಿದ್ದ ₹ 4.37 ಕೋಟಿ ಮೊತ್ತದಷ್ಟು ವಾಸ್ತವಿಕ ಸಾಗಣೆ ವೆಚ್ಚವನ್ನು ಒಳಗೊಂಡಿರುತ್ತದೆ. ವಿಶೇಷ ಪ್ಯಾಕೇಜಿನ ಪಾವತಿಯನ್ನು ಉದ್ಯೋಗಿಗಳು ವಿದ್ಯುತ್ ಸ್ಥಾವರದಲ್ಲಿ ಕೆಲಸ ಮಾಡಲು ಪ್ರೋತ್ಸಾಹಿಸುವ ಉದ್ದೇಶದಿಂದ ನೀಡಿರುವುದರಿಂದ, ಅದನ್ನು ನಿರಂತರವಾಗಿ ಭರಿಸಲಾಗಿರುವ ವೆಚ್ಚಗಳನ್ನಾಗಿ ಪರಿಗಣಿಸಿರುವುದಿಲ್ಲ.

iii. ಕಂಪನಿಯು, ವಸತಿಗೃಹದಲ್ಲಿ ವಾಸಿಸಲು ಉದ್ಯೋಗಿಗಳು ನಿರಾಕರಿಸಿದನಂತರ (ಫೆಬ್ರವರಿ 2018) ವಿಳಂಬವಾಗಿ ಒಂದು ವರ್ಷಕ್ಕಿಂತಲೂ ಹೆಚ್ಚಿನ ಸಮಯ ಕಳೆದನಂತರ ವಸತಿಗೃಹವನ್ನು ಗುತ್ತಿಗೆಗೆ ನೀಡುವ ಆಯ್ಕೆಯನ್ನು ಕಂಡುಕೊಂಡಿತು (ಮೇ 2019). ಕಂಪನಿಯ ಪ್ರಸ್ತಾವನೆಗೆ ಪ್ರತಿಕ್ರಿಯಿಸಿದ ಜೆಎಸ್‌ಡಬ್ಲ್ಯು ಸ್ಟೀಲ್ ನಿಯಮಿತವು ಪ್ರಸ್ತುತ ಇರುವಂತಹ ಅನುಕೂಲತೆಗಳನ್ನು ಬಾಡಿಗೆ ಅಥವಾ ಗುತ್ತಿಗೆ ಆಧಾರದ ಮೇರೆಗೆ ತೆಗೆದುಕೊಳ್ಳಲು ತನ್ನ ಆಸಕ್ತಿಯನ್ನು ವ್ಯಕ್ತಪಡಿಸಿತು (ಜುಲೈ 2019). ಆದಾಗ್ಯೂ, ಅದರ ಒಪ್ಪಿಗೆಯನ್ನು ಪಡೆದ ದಿನಾಂಕದಿಂದ ಹದಿನಾಲ್ಕು ತಿಂಗಳುಗಳು ಕಳೆದ ನಂತರ ಕೇವಲ ಸೆಪ್ಟಂಬರ್ 2020ರಲ್ಲಿ ಕಂಪನಿಯು ಜೆಎಸ್‌ಡಬ್ಲ್ಯು ಸ್ಟೀಲ್ ನಿಯಮಿತದೊಂದಿಗೆ ಗುತ್ತಿಗೆ ಒಡಂಬಡಿಕೆಯನ್ನು ಅಂತಿಮರೂಪಕ್ಕೆ ತಂದಿತು. ದರ ಸಂಧಾನ ಹಾಗೂ ಒಡಂಬಡಿಕೆಯನ್ನು ಅಂತಿಮರೂಪಕ್ಕೆ ತರಲು ಆರು ತಿಂಗಳುಗಳ ಒಂದು ನ್ಯಾಯಸಮ್ಮತ ಅವಧಿಯನ್ನು ಪರಿಗಣಿಸಿದನಂತರ, ಕಂಪನಿಯು ಜನವರಿ 2020ರಿಂದ ಆಗಸ್ಟ್ 2020ರ ಅವಧಿಯಲ್ಲಿ ₹ 3.08 ಕೋಟಿ ಮೊತ್ತದಷ್ಟು ಗುತ್ತಿಗೆ ಬಾಡಿಗೆಯನ್ನು ಗಳಿಸುವ ಅವಕಾಶವನ್ನು ಕಳೆದುಕೊಂಡಿತು.

ಜೆಎಸ್‌ಡಬ್ಲ್ಯು ಜೊತೆ ಒಡಂಬಡಿಕೆಯನ್ನು ಅಂತಿಮರೂಪಕ್ಕೆ ತರುವಲ್ಲಿನ ವಿಳಂಬವು ಗುತ್ತಿಗೆ ಬಾಡಿಗೆಗೆ ಸಂಬಂಧಿಸಿದಂತೆ ದರ ಸಂಧಾನ ಮಾಡುವುದು ಹಾಗೂ ಕೋವಿಡ್ 19 ಪ್ಯಾಂಡೆಮಿಕ್ ಕಾರಣ ಮಾರ್ಚ್ 2020ರಲ್ಲಿ ದೇಶ ವ್ಯಾಪ್ತಿ ವಿಧಿಸಲಾಗಿದ್ದಂತಹ ಲಾಕ್‌ಡೌನ್ ಕಾರಣ ವಿಳಂಬವಾಗಿತ್ತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2021). ಮುಂದುವರೆದು, ಉದ್ಯೋಗಿಗಳು ವಸತಿಗೃಹಗಳಲ್ಲಿ ವಾಸಿಸಿದ್ದರೂ ಸಹ, ಕಾರ್ಯನಿರ್ವಾಹಕ ಇಂಜಿನಿಯರ್ ಹಾಗೂ ಅವರಿಗಿಂತ ಉನ್ನತ ಮಟ್ಟದ ಅಧಿಕಾರದಲ್ಲಿರುವಂತಹ ಅಧಿಕಾರಿಗಳಿಗೆ ಸಂಬಂಧಿಸಿದಂತೆ ತುರ್ತು ಕೆಲಸಗಳನ್ನು ನಿರ್ವಹಿಸಲು ₹ 2.92 ಕೋಟಿ ಮೊತ್ತವನ್ನು ಸಾರಿಗೆ ವ್ಯವಸ್ಥೆಯ ಕಡೆಗೆ ಅನಿವಾರ್ಯವಾಗಿ ಭರಿಸಲೇಬೇಕಾಗುವುದು ಎಂಬುದಾಗಿಯೂ ತಿಳಿಸಿತು. ಇದನ್ನು ಪರಿಗಣಿಸಿದಂತೆ, ಲೆಕ್ಕಪರಿಶೋಧನೆಯಲ್ಲಿ ಲೆಕ್ಕಹಾಕಲಾಗಿರುವ ₹ 7.20 ಕೋಟಿ ಮೊತ್ತಕ್ಕೆ ಪ್ರತಿಯಾಗಿ ವಾಸ್ತವಿಕವಾಗಿ ಭರಿಸಲಾಗುವ ನಿರಂತರ ವೆಚ್ಚವು ₹ 4.28 ಕೋಟಿ ಆಗುತ್ತದೆ ಹಾಗೂ ₹ 4.62 ಕೋಟಿ ಮೊತ್ತದಷ್ಟು ಗುತ್ತಿಗೆ ಬಾಡಿಗೆಯನ್ನು ಪರಿಗಣಿಸಿದನಂತರ ₹ 0.34 ಕೋಟಿ ಮೊತ್ತವು ಉಳಿತಾಯವಾಗುತ್ತದೆ, 96 ವಸತಿಗೃಹಗಳನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಗೆ (ಕೆಎಸ್‌ಐಎಸ್‌ಎಫ್) ಹಂಚಿಕೆ ಮಾಡಲಾಗಿರುವುದು ಹಾಗೂ ಇದರಿಂದಾಗಿ ವಸತಿಗೃಹ ನಿರ್ಮಾಣದ ಗುರಿಯಾಗಿಸಿಕೊಳ್ಳಲಾಗಿದ್ದ ಉದ್ದೇಶವನ್ನು ಭಾಗಶಃವಾಗಿ ಈಡೇರಿಸಿಕೊಳ್ಳಲಾಗಿರುವುದು ಎಂಬುದಾಗಿಯೂ ತಿಳಿಸಿತು.

ವಸತಿಗೃಹಗಳನ್ನು ತೆಗೆದುಕೊಳ್ಳಲು ಜೆಎಸ್‌ಡಬ್ಲ್ಯು ತನ್ನ ಒಪ್ಪಿಗೆಯನ್ನು ಜುಲೈ 2019ರಲ್ಲಿಯೇ ಅಂದರೆ ರಾಷ್ಟ್ರ ವ್ಯಾಪ್ತಿ ಲಾಕ್‌ಡೌನ್‌ಗೆ ಏಳು ತಿಂಗಳುಗಳ ಮುಂಚಿತವಾಗಿಯೇ ತಿಳಿಸಿತ್ತಾದ್ದರಿಂದ, ರಾಷ್ಟ್ರ ವ್ಯಾಪಿ ಲಾಕ್‌ಡೌನ್ ಹಾಗೂ ಗುತ್ತಿಗೆ ಬಾಡಿಗೆಯ ದರಸಂಧಾನಗಳು ಒಡಂಬಡಿಕೆಯನ್ನು ಅಂತಿಮರೂಪಕ್ಕೆ ತರುವಲ್ಲಿ ವಿಳಂಬಕ್ಕೆ ದಾರಿ ಮಾಡಿಕೊಟ್ಟಿದ್ದವು ಎಂಬ ವಾದವು ಒಪ್ಪುವಂತಿಲ್ಲ. ಎರಡನೆಯದಾಗಿ, ಪ್ರಸ್ತುತ ಉದ್ಯೋಗಿಗಳನ್ನು ಬಳ್ಳಾರಿ ಪಟ್ಟಣದಿಂದ (ಸ್ಥಾವರದಿಂದ 25 ಕಿ.ಮೀ. ದೂರ) ಸಾಗಣೆ ಮಾಡಲಾಗುತ್ತಿರುವುದರಿಂದ, ಉದ್ಯೋಗಿಗಳು ವಸತಿಗೃಹಗಳಲ್ಲಿ ನೆಲೆಸಿದ್ದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಹಾಗೂ ಅವರಿಗಿಂತ ಉನ್ನತ ಹುದ್ದೆಯಲ್ಲಿರುವವರಿಗೆ ತುರ್ತು ಸಂದರ್ಭಗಳಲ್ಲಿ ಹಾಜರಾಗುವ ಸಲುವಾಗಿ ಸಾಗಣೆ ವೆಚ್ಚಗಳು ಇನ್ನೂ ಕಡಿಮೆಯಾಗುತ್ತಿತ್ತು. ಕಂಪನಿಯು ₹ 0.34 ಕೋಟಿ ಮೊತ್ತದಷ್ಟು ಉಳಿತಾಯವನ್ನು ಲೆಕ್ಕಹಾಕುವ ವೇಳೆಯಲ್ಲಿ ₹ 2.83 ಕೋಟಿ ಮೊತ್ತದಷ್ಟು ಮನೆ ಬಾಡಿಗೆ ಭತ್ಯೆಯ ಮೇಲಿನ ವೆಚ್ಚವನ್ನು ಪರಿಗಣಿಸಿರುವುದಿಲ್ಲ, ಇದರಿಂದಾಗಿ ₹ 2.49 ಕೋಟಿ ಮೊತ್ತದಷ್ಟು ನಷ್ಟ ಸಂಭವಿಸಿರುತ್ತದೆ. ಮೂರನೆಯದಾಗಿ, 594 ವಸತಿಗೃಹಗಳ ಪೈಕಿ 96ನ್ನು (ಶೇಕಡಾ 16) ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಗೆ (ಕೆಎಸ್‌ಐಎಸ್‌ಎಫ್) ಹಂಚಿಕೆ ಮಾಡಲಾಯಿತಾದರೂ, ಸ್ಥಾವರದ ಕಾರ್ಯಾಚರಣೆಗಾಗಿ ಉದ್ಯೋಗಿಗಳಿಗೆ ಯೋಜನಾ ಪ್ರದೇಶದ ಸಮೀಪದಲ್ಲಿ ವಸತಿಸೌಲಭ್ಯವನ್ನು ಒದಗಿಸುವ ಪ್ರಮುಖ ಉದ್ದೇಶವು ಈಡೇರಲಿಲ್ಲ ಎಂಬ ವಾಸ್ತವಾಂಶವು ಉಳಿದುಕೊಳ್ಳುತ್ತದೆ.

ಕಂಪನಿಯು ತನ್ನ ಕಾರ್ಯಾಚರಣೆಗಳಿಗಾಗಿ ಸಾಲ ಮಾಡಿ ತಂದಂತಹ ಹಣಕಾಸಿನ ಮೇಲೆ ಬಹಳಷ್ಟು ಮಟ್ಟಿಗೆ ಅವಲಂಬಿತವಾಗಿರುತ್ತದೆ ಹಾಗೂ ಉದ್ಯೋಗಿಗಳು ವಸತಿಗೃಹದಲ್ಲಿ ನೆಲೆಸಲು ಆತಂಕ ವ್ಯಕ್ತಪಡಿಸಿದ್ದರೂ ಗಮನಾರ್ಹವಾದಂತಹ ಮೊತ್ತವನ್ನು (₹ 118.46 ಕೋಟಿ) ಹೂಡಿಕೆ ಮಾಡಿದ್ದು ಸಮರ್ಥನೆಯ ಕೊರತೆಯಿಂದ ಕೂಡಿತ್ತು.

**ಕಂಪನಿಯು, ಎಲ್ಲಾ ಬಂಡವಾಳ ಕೇಂದ್ರೀಕೃತ ಯೋಜನೆಗಳ ಬಗ್ಗೆ ಅಂತಹ ತೀರ್ಮಾನಗಳನ್ನು ತೆಗೆದುಕೊಳ್ಳುವ ವೇಳೆಯಲ್ಲಿ ಅಗತ್ಯತೆ ಮತ್ತು ಅಂತಹ ತೀರ್ಮಾನಗಳ ಮೇಲೆ ಪರಿಣಾಮ ಬೀರಬಹುದಾದಂತಹ ಅಂಶಗಳನ್ನು ಪರಿಗಣಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತದೆ.**

ಲೆಕ್ಕಪರಿಶೋಧನೆಯು ಮಾಡಿದ ಶಿಫಾರಸುಗಳನ್ನು ಗಮನಿಸಲಾಗಿದೆ ಮತ್ತು ಭವಿಷ್ಯದಲ್ಲಿ ಕಾಳಜಿ ವಹಿಸಲಾಗುವುದು ಎಂದು ಆಡಳಿತ ಮಂಡಳಿ (ಫೆಬ್ರವರಿ 2022) ತಿಳಿಸಿತು.

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**

### *2.2. ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಟೆಂಡರಿನಲ್ಲಿ ಪೂರ್ವಾರ್ಹತಾ ಮಾನದಂಡಗಳ ತಿದ್ದುಪಡಿ ಮಾಡಿದ್ದುದು*

**ಟೆಂಡರಿನಲ್ಲಿ ಪೂರ್ವಾರ್ಹತೆ ಮಾನದಂಡಕ್ಕೆ ತಿದ್ದುಪಡಿ ಮಾಡಿದ್ದು ಸ್ಪರ್ಧಾತ್ಮಕ ಸವಾಲನ್ನು ಮೊಟಕುಗೊಳಿಸಿತು ಹಾಗೂ ಎಲ್‌ಟಿ ಏರಿಯಲ್ ಬಂಚ್ಡ್ ಕೇಬಲ್ಲುಗಳ ಖರೀದಿಗೆ ಸಂಬಂಧಿಸಿದಂತೆ ₹ 65.34 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚದಲ್ಲಿ ಗುತ್ತಿಗೆಯನ್ನು ಅಧಿಕ ದರಗಳಲ್ಲಿ ನೀಡುವಲ್ಲಿ ಪರಿಣಮಿಸಿತು.**

ರಾಜ್ಯದಲ್ಲಿ ವಿದ್ಯುತ್ ವಿತರಣೆಯಲ್ಲಿ ತೊಡಗಿಸಿಕೊಂಡಿರುವಂತಹ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು (ಕಂಪನಿ) ತನ್ನ ಬಂಡವಾಳ ಮತ್ತು ಕಾರ್ಯಾಚರಣೆಗಳ ಹಾಗೂ ನಿರ್ವಹಣಾ ಕಾಮಗಾರಿಗಳನ್ನು (ಉಪ-ಸ್ಟೇಷನ್ನುಗಳು ಮತ್ತು ಮಾರ್ಗಗಳ ನಿರ್ಮಾಣ, ಪ್ರಸಕ್ತ ಇರುವಂತಹ ವಿತರಣಾ ಸಂಪರ್ಕಜಾಲವನ್ನು ಬಲಪಡಿಸುವಿಕೆ, ಸೇವಾ ಸಂಪರ್ಕಗಳು, ಇತ್ಯಾದಿ) ನಡೆಸಿಕೊಂಡು ಹೋಗುವ ಸಲುವಾಗಿ ಟೆಂಡರು ಪ್ರಕ್ರಿಯೆಯ ಮೂಲಕ ವಿವಿಧ ಸರಕುಸಾಮಗ್ರಿಗಳನ್ನು ಖರೀದಿಸುವುದು, ಅವೆಂದರೆ ಏರಿಯಲ್ ಬಂಚ್ಡ್ (ಎಬಿ) ಕೇಬಲ್ಲುಗಳು, ಭೂಗತ ಕೇಬಲ್ಲುಗಳು, ಟ್ರಾನ್ಸ್‌ಫಾರ್ಮರ್‌ಗಳು, ಕಂಡಕ್ಟರ್‌ಗಳು, ಕಂಬಗಳು, ಇನ್ಸ್ಯುಲೇಟರುಗಳು, ಇತ್ಯಾದಿ. ಕಂಪನಿಯ ನಿರ್ದೇಶಕರುಗಳ ಮಂಡಳಿಯು/ಕೇಂದ್ರ ಖರೀದಿ ಸಮಿತಿಯು[130] (ಸಿಪಿಸಿ) ಟೆಂಡರುಗಳ ಅನುಮೋದನೆಗೆ ಹಾಗೂ ಗುತ್ತಿಗೆಗಳನ್ನು ನೀಡಲು ಅಧಿಕಾರವನ್ನು ಹೊಂದಿದ್ದವು.

ಕಂಪನಿಯು 2014-15ರಿಂದ 2019-20ರ ಅವಧಿಯಲ್ಲಿ ಬಂಡವಾಳ ಕಾಮಗಾರಿಗಳಿಗಾಗಿ ₹ 173.16 ಕೋಟಿ[131] ಮೌಲ್ಯದಲ್ಲಿ 3,731 ಕಿಮೀಗಳಷ್ಟು ಒಟ್ಟಾರೆ ಉದ್ದದ ಲೋ ಟೆನ್‌ಷನ್ (ಎಲ್‌ಟಿ) ಏರಿಯಲ್ ಬಂಚ್ಡ್ (ಎಬಿ) ಕೇಬಲ್ಲುಗಳನ್ನು ಖರೀದಿಸಿತು. ಕಂಪನಿಯು ಅದೇ ಅವಧಿಯಲ್ಲಿ ಎಲ್‌ಟಿ ಎಬಿ ಕೇಬಲ್ ಕಾಮಗಾರಿಯ ಒಂದು ಭಾಗ ಎಂಬ ಗುತ್ತಿಗೆಯಾಗಿ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯನ್ನೂ (ಐಪಿಡಿಎಸ್) ಸಹ ಕಾರ್ಯಗತಗೊಳಿಸಿತು. ಲೆಕ್ಕಪರಿಶೋಧನೆಯು ಮೇಲೆ ತಿಳಿಸಲಾದಂತಹ

[130] ಎಲ್ಲಾ ಐದು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸರಕುಸಾಮಗ್ರಿಗಳ ಖರೀದಿಯಲ್ಲಿ ಪೂರ್ವಾರ್ಹತೆ ಮಾನದಂಡದಲ್ಲಿ ಸಮಾನತೆಯನ್ನು ತರುವ ಸಲುವಾಗಿ ಕೇಂದ್ರ ಖರೀದಿ ಸಮಿತಿಯನ್ನು (ಸಿಪಿಸಿ) ರಚಿಸಲಾಯಿತು (ಆಗಸ್ಟ್ 2016), ಅದು ಎಲ್ಲಾ ಐದು ವಿದ್ಯುತ್ ಸರಬರಾಜು ಕಂಪನಿಗಳಿಂದ ಸದಸ್ಯರುಗಳನ್ನು (ವ್ಯವಸ್ಥಾಪಕ ನಿರ್ದೇಶಕರುಗಳು ಮತ್ತು ನಿರ್ದೇಶಕರುಗಳು ತಾಂತ್ರಿಕ) ಹೊಂದಿದೆ.

[131] [50 ಕಿಮೀಗಳು × ₹ 3.22 ಲಕ್ಷ (ಟೆಂಡರು ಬಿಸಿಎನ್-67/2014-15)] + [700 ಕಿಮೀಗಳು ₹ 4.10 ಲಕ್ಷ (ಟೆಂಡರು ಬಿಸಿಪಿ 846/2014-15)] + [2,981 ಕಿಮೀಗಳು × ₹4.80 ಲಕ್ಷ/ ₹4.76 ಲಕ್ಷ (ಟೆಂಡರು ಬಿಸಿಪಿ-1040/2017-18)].

ಅವಧಿಯಲ್ಲಿನ ಎಲ್‌ಟಿ ಎಬಿ ಕೇಬಲ್‌ನ ಟೆಂಡರು ಹಾಗೂ ಖರೀದಿ ಪ್ರಕ್ರಿಯೆಗಳನ್ನು ಪರಿಶೀಲಿಸಿತು ಹಾಗೂ ಎರಡು ಟೆಂಡರುಗಳಲ್ಲಿ ಸವಾಲುದಾರರುಗಳ ಪೂರ್ವಾರ್ಹತೆ ಅಗತ್ಯತೆಗಳನ್ನು ಈ ಕೆಳಗೆ ತಿಳಿಸಿರುವಂತೆ ತಿದ್ದುಪಡಿ ಮಾಡಲಾಗಿತ್ತು ಎಂಬುದನ್ನು ಗಮನಿಸಿತು.

ಕಂಪನಿಯು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಎರಡು ಟೆಂಡರುಗಳನ್ನು ಆಹ್ವಾನಿಸಿತು:

**ಕೋಷ್ಟಕ ಸಂಖ್ಯೆ: 2.2.1: ಎಲ್‌ಟಿ ಎಬಿ ಕೇಬಲ್‌ನ ಖರೀದಿಗೆ ಸಂಬಂಧಿಸಿದಂತೆ ಟೆಂಡರುಗಳ ವಿವರಗಳು**

| ಕ್ರಮ ಸಂಖ್ಯೆ | ಟೆಂಡರು I | ಟೆಂಡರು II |
|---|---|---|
| 1 | ಸಂಖ್ಯೆ ಬಿಸಿಪಿ–846/2014–15/ಫೆಬ್ರವರಿ 2015 | ಬಿಸಿಪಿ–1040/2017–18/ಸೆಪ್ಟಂಬರ್ 2017 |
| 2 | ಪರಿಮಾಣ: 700 ಕಿಮೀಗಳು | ಪರಿಮಾಣ: 2,981 ಕಿಮೀಗಳು |
| 3 | ಗುತ್ತಿಗೆದಾರರು: ಮೆ. ಎಸ್‌ಬಿಇಇ ಕೇಬಲ್ಸ್ (ಇಂಡಿಯಾ) ಲಿಮಿಟೆಡ್, ಬೆಂಗಳೂರು | ಗುತ್ತಿಗೆದಾರರು: ಮೆ. ಎಸ್‌ಬಿಇಇ ಕೇಬಲ್ಸ್ (ಇಂಡಿಯಾ) ಲಿಮಿಟೆಡ್, ಬೆಂಗಳೂರು |
| 4 | ಗುತ್ತಿಗೆಯನ್ನು ವಹಿಸಿದ ಮೊತ್ತ ಕಿಮೀ ಒಂದಕ್ಕೆ ₹ 4.10 ಲಕ್ಷ | ಗುತ್ತಿಗೆಯನ್ನು ವಹಿಸಿದ ಮೊತ್ತ ಕಿಮೀ ಒಂದಕ್ಕೆ ₹ 4.80 ಲಕ್ಷ / ₹ 4.76 ಲಕ್ಷ |
| 5 | ಒಟ್ಟಾರೆ ಗುತ್ತಿಗೆ ಮೌಲ್ಯ: ₹ 28.70 ಕೋಟಿ | ಒಟ್ಟಾರೆ ಗುತ್ತಿಗೆ ಮೌಲ್ಯ: ₹ 142.85 ಕೋಟಿ |

ಇತರೆ ಸಾಮಗ್ರಿಗಳ (ಎಲ್‌ಟಿ ಎಬಿ ಕೇಬಲ್ಲುಗಳನ್ನು ಹೊರತುಪಡಿಸಿ ಅಂದರೆ ಎಸಿಎಸ್‌ಆರ್ ಕಂಡಕ್ಟರ್, ಟ್ರಾನ್ಸ್‌ಫಾರ್ಮರುಗಳು, ಭೂಗತ ಕೇಬಲ್ಲುಗಳು, ಇತ್ಯಾದಿ) ಖರೀದಿಗೆ ಟೆಂಡರುಗಳು ಒಂದು ಷರತ್ತನ್ನು ಒಳಗೊಂಡಿದ್ದವು, ಅದೇಂದರೆ, 'ಸವಾಲುದಾರರುಗಳು ಪ್ರಸಕ್ತ ಟೆಂಡರಿಗೆ ಇಡಲಾಗಿರುವ ಪರಿಮಾಣದ ಕಡೆಯಪಕ್ಷ ಶೇಕಡಾ 50ರಷ್ಟು ಪರಿಮಾಣದ ಸರಬರಾಜಿಗಾಗಿ ಕರ್ನಾಟಕದ ಯಾವುದೇ ವಿದ್ಯುತ್ ಸರಬರಾಜು ಕಂಪನಿಗಳು/ಭಾರತದಲ್ಲಿನ ಯಾವುದೇ ವಿದ್ಯುತ್ ಸರಬರಾಜು ಸಂಬಂಧಿತ ಸೇವೆಗಳನ್ನು ಒದಗಿಸುವ ಸಂಸ್ಥೆಗಳಿಂದ ಪಡೆದಿರತಕ್ಕದ್ದು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, 'ಭಾರತದಲ್ಲಿನ ಯಾವುದೇ ವಿದ್ಯುತ್ ಸರಬರಾಜು ಸಂಬಂಧಿತ ಸೇವೆಗಳನ್ನು ಒದಗಿಸುವ ಸಂಸ್ಥೆಗಳಿಂದ' ಪದಗಳನ್ನು ತೆಗೆದುಹಾಕುವ ಮೂಲಕ ಈ ಷರತ್ತನ್ನು ಮಾರ್ಪಾಡು ಮಾಡಲಾಯಿತು. ಈ ಷರತ್ತಿನ ತಿದ್ದುಪಡಿಯು ಕರ್ನಾಟಕದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರಬರಾಜು ಮಾಡಿರದ ಬಹಳಷ್ಟು ಸಂಖ್ಯೆಯ ಸವಾಲುದಾರರುಗಳಿಗೆ ಟೆಂಡರು ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ನಿರ್ಬಂಧವನ್ನು ಹೇರಿತು. ಆದಾಗ್ಯೂ, ಇದು ಹಿಂದಿನ ಸಾಲುಗಳಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ/ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ಎಲ್‌ಟಿ ಎಬಿ ಕೇಬಲ್ಲುಗಳನ್ನು ಸರಬರಾಜು ಮಾಡಿದ್ದಂತಹ ಏಕೈಕ ಸವಾಲುದಾರರಿಗೆ (ಮೆ. ಎಸ್‌ಬಿಇಇ ಕೇಬಲ್ಸ್ (ಇಂಡಿಯಾ) ಲಿಮಿಟೆಡ್) ಹೊಂದಿಕೆಯಾಯಿತು. ಈ ತಿದ್ದುಪಡಿಗಳು ಒಂದು ಏಕೈಕ ಸಂಸ್ಥೆಗೆ ಅನರ್ಹ ಸಹಾಯ ಮಾಡುವಲ್ಲಿ ಪರಿಣಮಿಸಿದ್ದವು ಹಾಗೂ ಇದರಿಂದ ಟೆಂಡರಿನ ಉದ್ದೇಶ ಈಡೇರಲಿಲ್ಲ. ಟೆಂಡರು ಷರತ್ತುಗಳಿಗೆ ತಿದ್ದುಪಡಿಯನ್ನು ನಿರ್ದೇಶಕರುಗಳ ಮಂಡಳಿಯು/ಕೇಂದ್ರ ಖರೀದಿ ಸಮಿತಿಯು ಅನುಮೋದನೆ ನೀಡಿದ್ದವು (ಸೆಪ್ಟಂಬರ್ 2015/ಜುಲೈ 2017), ಇದು ಒಂದು ಏಕೈಕ ಸಂಸ್ಥೆಗೆ ಅನರ್ಹ ಸಹಾಯ ಮಾಡುವಲ್ಲಿ ಪರಿಣಮಿಸಿತು.

ಅಗ್ಗದ ದರಗಳಲ್ಲಿ ಎಲ್‌ಟಿ ಎಬಿ ಕೇಬಲ್ಲುಗಳನ್ನು ಸರಬರಾಜು ಮಾಡುವ ಇತರೆ ಸರಬರಾಜುದಾರರುಗಳು[132] ಮಾರುಕಟ್ಟೆಯಲ್ಲಿ ಲಭ್ಯವಿದ್ದರು, 2017–18 ಮತ್ತು 2018–19ರಲ್ಲಿ ಕಿಮೀ ಒಂದಕ್ಕೆ ಪ್ರಸಕ್ತ ಇದ್ದಂತಹ ಮಾರುಕಟ್ಟೆ ದರವು ₹ 2.40 ಲಕ್ಷ[133] ಆಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಗುತ್ತಿಗೆಗಳನ್ನು ಮೆ. ಎಸ್‌ಬಿಇಇ ಕೇಬಲ್ಸ್ (ಇಂಡಿಯಾ)

[132] ಮೆ. ಪ್ಯಾರಾಮೌಂಟ್ ಕಮ್ಯುನಿಕೇಷನ್ಸ್, ಮೆ. ಗುಜರಾತ್ ಅಪರ್ ಇಂಡಸ್ಟ್ರೀಸ್, ಮೆ. ಗುಜರಾತ್ ಲೇಸರ್ ಪವರ್ ಅಂಡ್ ಇನ್‌ಫ್ರಾ ಪ್ರೈ ಲಿ, ಮೆ. ಹೌರಾ ಡೈನಮಿಕ್ ಕೇಬಲ್ಸ್, ಜೈಪುರ್, ಮೇ. ಇನ್ಸುಕಾನ್ ಕೇಬಲ್ಸ್ ಅಂಡ್ ಕಂಡಕ್ಟರ್ಸ್ (ಪ್ರೈ) ಲಿಮಿಟೆಡ್, ಮೆ. ಜೈಪುರ್ ಅಂಡ್ ಆಲ್ಫಾ ಕಮ್ಯುನಿಕೇಷನ್ಸ್ ಲಿ, ಫರುಖಿಯಾಬಾದ್, ಇತ್ಯಾದಿ

[133] ಈ ದರವು ಗುತ್ತಿಗೆದಾರರುಗಳು 2017–18 ಮತ್ತು 2018–19ರಲ್ಲಿ ಐಪಿಡಿಎಸ್ ಅಡಿಯಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಗಳಿಗಾಗಿ ವಿವಿಧ ತಯಾರಕರುಗಳಿಂದ ಎಲ್‌ಟಿ ಎಬಿ ಕೇಬಲ್ಲುಗಳ ಖರೀದಿಗಳ ವೆಚ್ಚವನ್ನು ಪ್ರತಿನಿಧಿಸುತ್ತದೆ.

ಲಿಮಿಟೆಡ್, ಇವರನ್ನು ಹೊರತುಪಡಿಸಿ, ಇತರರಿಗೆ ನೀಡಲಾಗಿತ್ತು. ಪೂರ್ವಾರ್ಹತೆ ಅಗತ್ಯತೆಗಳ ಮೇಲಿನ ನಿರ್ಬಂಧಿತ ಟೆಂಡರು ಷರತ್ತು ಸ್ಪರ್ಧಾತ್ಮಕ ಸವಾಲುಗಳನ್ನು ಮೊಟಕುಗೊಳಿಸಿತು, ಇದು ಪ್ರಸಕ್ತ ಮಾರುಕಟ್ಟೆಯಲ್ಲಿ ಇದ್ದಂತಹ ದರಗಳಿಗಿಂತ ಬಹಳಷ್ಟು ಅಧಿಕ ದರಗಳಲ್ಲಿ (ಅಂದರೆ ಶೇಕಡಾ 100ರಷ್ಟು) ಖರೀದಿಸುವಲ್ಲಿಗೆ ದಾರಿ ಮಾಡಿಕೊಟ್ಟಿತು. ಕಂಪನಿಯು ಎಸ್‌ಬಿಇಇ ಕೇಬಲ್ಸ್ (ಇಂಡಿಯಾ) ಲಿಮಿಟೆಡ್, ಇವರಿಂದ 2,981 ಕಿಮೀಗಳಷ್ಟು ಉದ್ದದ ಎಲ್‌ಟಿ ಎಬಿ ಕೇಬಲನ್ನು ಪ್ರಸಕ್ತ ಇದ್ದಂತಹ ಕಿಮೀ ಒಂದಕ್ಕೆ ₹ 2.40 ಲಕ್ಷ ಮೊತ್ತದಷ್ಟು ಮಾರುಕಟ್ಟೆ ದರಕ್ಕೆ ಪ್ರತಿಯಾಗಿ ಕಿಮೀ ಒಂದಕ್ಕೆ ₹ 4.80 ಲಕ್ಷ/ ₹ 4.76 ಲಕ್ಷ ಮೊತ್ತಗಳಷ್ಟು ಸವಾಲಿನಲ್ಲಿ ಘೋಷಿಸಲಾಗಿದ್ದಂತಹ ದರಗಳಲ್ಲಿ ಖರೀದಿಸಿತು. ಪ್ರಸಕ್ತ ಇದ್ದಂತಹ ಮಾರುಕಟ್ಟೆ ದರಗಳನ್ನು ಪರಿಗಣಿಸಿದಂತೆ, ಕಂಪನಿಯು ಟೆಂಡರು ಸಂಖ್ಯೆ ಬಿಸಿಪಿ–1040/2017–18[134] ಪ್ರತಿಯಾಗಿ 2,981 ಕಿಮೀಗಳಷ್ಟು ಎಲ್‌ಟಿ ಎಬಿ ಕೇಬಲ್ಲಿನ ಖರೀದಿಯ ಮೇಲೆ ₹ 65.34 ಕೋಟಿ[135] ಮೊತ್ತವನ್ನು ಹೆಚ್ಚುವರಿಯಾಗಿ/ಅಧಿಕ ಪ್ರಮಾಣದಲ್ಲಿ ಭರಿಸಿತ್ತು.

22 ಜೂನ್ 2017ರಂದು ಬಿಡ್ಡುದಾರರ ಹೆಚ್ಚಿನ ಭಾಗವಹಿಸುವಿಕೆಗಾಗಿ ನಡೆದ ಸಭೆಯಲ್ಲಿ ಕೇಂದ್ರ ಖರೀದಿ ಸಮಿತಿಯು ಪೂರ್ವಾರ್ಹತೆಯ ಮಾನದಂಡವನ್ನು ಅಂತಿಮಗೊಳಿಸಿದೆ ಎಂದು ಸರ್ಕಾರವು ಉತ್ತರಿಸಿತು (ಜನವರಿ 2022). ಸಂಪೂರ್ಣ ಪೂರೈಕೆ ಒಪ್ಪಂದಕ್ಕೆ ಒಟ್ಟು ಟರ್ನ್‌ಕೀ ಒಪ್ಪಂದಗಳಲ್ಲಿ ಬಿಡ್‌ದಾರರು ಉಲ್ಲೇಖಿಸಿದ ಬೆಲೆಗಳನ್ನು ಹೋಲಿಸಲಾಗುವುದಿಲ್ಲ ಎಂದೂ ತಿಳಿಸಿತು. ಚಾಲ್ತಿಯಲ್ಲಿರುವ ಮಾರುಕಟ್ಟೆ ದರವಾಗಿ ಪ್ರತಿ ಕಿ.ಮೀ.ಗೆ ₹ 2.40 ಲಕ್ಷ ಎಂದು ಲೆಕ್ಕಪರಿಶೋಧನೆಯು ಪರಿಗಣಿಸಿರುವುದಕ್ಕೆ ಆಧಾರವು ತಿಳಿದುಬರುತ್ತಿಲ್ಲವೆಂದೂ ಹೇಳಿದೆ.

ಉತ್ತರವು ಸ್ವೀಕಾರಾರ್ಹವಲ್ಲ ಏಕೆಂದರೆ ಪೂರ್ವಾರ್ಹತೆಯ ಮಾನದಂಡದಲ್ಲಿನ ತಿದ್ದುಪಡಿಯು ಉದ್ದೇಶಿಸಿದಂತೆ ಹೆಚ್ಚಿನ ಭಾಗವಹಿಸುವಿಕೆಗೆ ಕಾರಣವಾಗಲಿಲ್ಲ, ಬದಲಿಗೆ ಇದು ಏಕ ಬಿಡ್‌ದಾರರಿಂದ ನಿರ್ಬಂಧಿತ ಭಾಗವಹಿಸುವಿಕೆಯನ್ನು ಸುಲಭಗೊಳಿಸಿತು. ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲಾದ ಪ್ರತಿ ಕಿ.ಮೀ.ಗೆ ಚಾಲ್ತಿಯಲ್ಲಿರುವ ಮಾರುಕಟ್ಟೆ ದರ ₹ 2.40 ಲಕ್ಷವು 2017–18 ಮತ್ತು 2018–19ರ ಅವಧಿಯಲ್ಲಿ ಐಪಿಡಿಎಸ್ ಅಡಿಯಲ್ಲಿ ಕಾರ್ಯಗತಗೊಳಿಸಿದ ಕಾಮಗಾರಿಗಳಿಗಾಗಿ ಗುತ್ತಿಗೆದಾರರು ವಿವಿಧ ತಯಾರಕರಿಂದ ಎಲ್‌ಟಿ ಎಬಿ ಕೇಬಲ್‌ನ ಸಂಗ್ರಹಣೆಯ ವೆಚ್ಚವನ್ನು ಪ್ರತಿನಿಧಿಸುತ್ತದೆ. ಬೆಸ್ಕಾಂ (ಪ್ರತಿ ಕಿ.ಮೀ.ಗೆ ₹ 4.80 ಲಕ್ಷ) ಗುತ್ತಿಗೆ ನೀಡಿದ ದರವು ಚಾಲ್ತಿಯಲ್ಲಿರುವ ಮಾರುಕಟ್ಟೆ ದರಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ. ಇದಲ್ಲದೆ, ಎಸ್‌ಬಿಇಇ ಕೇಬಲ್ಸ್ (ಇಂಡಿಯಾ) ಲಿಮಿಟೆಡ್ ಉಲ್ಲೇಖಿಸಿದ ದರಗಳು ವ್ಯಾಪಕ ಭಾಗವಹಿಸುವಿಕೆಯ ಅನುಪಸ್ಥಿತಿಯಲ್ಲಿ ಸ್ಪರ್ಧಾತ್ಮಕವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಕಂಪನಿಯು ಯಾವುದೇ ವಿಧಾನಗಳನ್ನು ಹೊಂದಿರಲಿಲ್ಲ.

**ಟೆಂಡರುಗಳಲ್ಲಿ ಒಂದು ಸವಿಸ್ತೃತ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಂಪನಿಯು ಸರಕುಸಾಮಗ್ರಿಗಳ ಖರೀದಿಗಾಗಿ ಸವಾಲುದಾರರುಗಳ ಪೂರ್ವಾರ್ಹತೆ ಮಾನದಂಡವನ್ನು ಪ್ರಮಾಣಕವಾಗಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ. ಮಾನದಂಡದಲ್ಲಿನ ಸಡಿಸಗೊಳಿಸವಿಕೆಯು ಸೂಕ್ತ ಸಮರ್ಥನೆ ಹೊಂದಿರಬೇಕು ಮತ್ತು ಸಕ್ಷಮ ಪ್ರಾಧಿಕಾರದ ಅನುಮೋದನೆಯ ನಂತರವಷ್ಟೆ ಮಾಡಬೇಕು.**

---

[134] ಹಿಂದಿನ ಟೆಂಡರು ಸಂಖ್ಯೆ ಬಿಸಿಪಿ–846/2014–15ರಲ್ಲಿನ ಹೆಚ್ಚುವರಿ ವೆಚ್ಚವನ್ನು ಪ್ರಸಕ್ತ ಇದ್ದಂತಹ ಮಾರುಕಟ್ಟೆ ದರಗಳ ಅನುಪಸ್ಥಿತಿಯಲ್ಲಿ ಪರಿಮಾಣೀಕರಿಸಿರುವುದಿಲ್ಲ.

[135] 2,385 ಕಿಮೀಗಳು ₹ 2.19 ಲಕ್ಷ + 596 ಕಿಮೀಗಳು ₹ 2.20 ಲಕ್ಷ (ಕಿಮೀ ಒಂದಕ್ಕೆ ಹೆಚ್ಚುವರಿ ವೆಚ್ಚವು ಶೇಕಡಾ 8.62ರ ದರದಲ್ಲಿ ಟೆಂಡರು ಪ್ರೀಮಿಯಂ ಅನ್ನು ಪರಿಗಣಿಸಿದನಂತರ ಘೋಷಿಸಲ್ಪಟ್ಟಿದ್ದ ದರ ಮತ್ತು ಮಾರುಕಟ್ಟೆ ದರದ ವ್ಯತ್ಯಾಸವನ್ನು ಪ್ರತಿನಿಧಿಸುತ್ತದೆ.

## ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

### *2.3. ಕರ್ನಾಟಕ ಭವನದ ನಿರ್ಮಾಣ – ನಿಷ್ಫಲ ಹೂಡಿಕೆ ಹಾಗೂ ವರಮಾನದ ನಷ್ಟ*

**ನವೀ ಮುಂಬೈನಲ್ಲಿ ಕರ್ನಾಟಕ ಭವನದ ನಿರ್ಮಾಣ ಹಾಗೂ ಅದರ ಕಾರ್ಯಾಚರಣೆಯಲ್ಲಿ ಕಂಪನಿಯ ಕಡೆಯಿಂದ ಆದಂತಹ ಲೋಪದೋಷಗಳ ಕಾರಣ ತಿಳಿಸಲಾಗಿದ್ದಂತಹ ಉದ್ದೇಶವು ಈಡೇರದಿದ್ದುದು, ಕಾಲಮಿತಿ ಮೀರಿದ್ದುದು ವೆಚ್ಚಗಳು ಮಿತಿಮೀರಿದ್ದುದು, ₹ 36.89 ಕೋಟಿ ಮೊತ್ತದ ನಿಷ್ಫಲ ವೆಚ್ಚ ಹಾಗೂ ₹ 1.31 ಕೋಟಿ ಮೊತ್ತದಷ್ಟು ವರಮಾನವು ನಷ್ಟವಾಗುವಲ್ಲಿ ಪರಿಣಮಿಸಿತು.**

ನಗರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಸಿಐಡಿಸಿಒ) ಮಹಾರಾಷ್ಟ್ರ ಸರ್ಕಾರ, ಇದು 1.0ರಷ್ಟು ಗರಿಷ್ಟ ಅನುಮತಿಸಬಹುದಾದ ನೆಲ ಪ್ರದೇಶದೊಂದಿಗೆ (ಎಫ್ಎಸ್ಐ) ರಾಜ್ಯ ಅತಿಥಿ ಗೃಹವನ್ನು (ಕರ್ನಾಟಕ ಭವನ) ನಿರ್ಮಿಸುವ ಸಲುವಾಗಿ ವಾಶಿ, ನವೀ ಮುಂಬೈನಲ್ಲಿ 2,520 ಚದರ ಮೀಟರುಗಳಷ್ಟು ಭೂಮಿಯನ್ನು ಕರ್ನಾಟಕ ಸರ್ಕಾರಕ್ಕೆ ಗುತ್ತಿಗೆ ಆಧಾರದ ಮೇರೆಗೆ ಹಂಚಿಕೆ ಮಾಡಿತು (ಜೂನ್ 2000). ಕರ್ನಾಟಕ ಸರ್ಕಾರವು ಕರ್ನಾಟಕ ಭವನದ ನಿರ್ಮಾಣದ ಕಾಮಗಾರಿಯನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ಗೆ (ಕಂಪನಿ) ವಹಿಸಿತು (ಮಾರ್ಚ್ 2005/ಜೂನ್ 2006).

ಕಂಪನಿಯು, ಟೆಂಡರುಗಳನ್ನು ಆಹ್ವಾನಿಸಿದನಂತರ ಕರ್ನಾಟಕ ಭವನ ನಿರ್ಮಾಣಕ್ಕಾಗಿ ಗುತ್ತಿಗೆಯನ್ನು ಮೆ. ಕ್ಲಾಸಿಕ್ ಕನ್‌ಸ್ಟ್ರಕ್ಷನ್ಸ್ ಪ್ರೈ ಲಿಮಿಟೆಡ್, ಇವರಿಗೆ ₹ 18.18 ಕೋಟಿ ಮೊತ್ತಕ್ಕೆ ಮೇ 2009ರ ವೇಳೆಗೆ ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ನೀಡಿತು (ಮಾರ್ಚ್ 2008). ಆದಾಗ್ಯೂ ಕಂಪನಿಯು ಕಟ್ಟಡವನ್ನು ಕರ್ನಾಟಕ ಭವನದ[136] ಸಮೀಪದಲ್ಲಿನ ಬೆಳವಣಿಗೆಗಳ ದೃಷ್ಟಿಯಿಂದ 1.5ರಷ್ಟು ಗರಿಷ್ಟ ಅನುಮತಿಸಬಹುದಾದ ನೆಲ ಪ್ರದೇಶದೊಂದಿಗೆ (ಎಫ್ಎಸ್ಐ) ಸ್ಟಾರ್ ಪ್ರವರ್ಗದ ಅತಿಥಿ ಗೃಹಕ್ಕೆ ಅವಕಾಶ ಮಾಡಿಕೊಡುವುದಕ್ಕಾಗಿ ಕಟ್ಟಡದ ವಿನ್ಯಾಸವನ್ನು ಮಾರ್ಪಾಡು ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದರಿಂದ (ಮಾರ್ಚ್ 2010) ₹ 7.19 ಕೋಟಿ ಮೊತ್ತದಷ್ಟು (ಶೇಕಡಾ 37ರಷ್ಟು ಪೂರ್ಣಗೊಂಡಿದೆ) ವೆಚ್ಚವನ್ನು ಭರಿಸಿದನಂತರ ಕಾಮಗಾರಿಯನ್ನು ಮಧ್ಯದಲ್ಲಿ ಸ್ಥಗಿತಗೊಳಿಸಲಾಯಿತು, 0.5ರಷ್ಟು ಹೆಚ್ಚುವರಿ ನೆಲ ಪ್ರದೇಶದ (ಎಫ್ಎಸ್ಐ) ಅನುಮತಿಗಾಗಿ ನವೀ ಮುಂಬೈ ಮುನಿಸಿಪಲ್ ಕಾರ್ಪೊರೇಷನ್‌ಗೆ (ಎನ್ಎಂಎಂಸಿ) ಮಾಡಲಾದ ಕೋರಿಕೆಯನ್ನು ಅದು ತಿರಸ್ಕರಿಸಿತು (ಫೆಬ್ರವರಿ 2011).

ಕಂಪನಿಯು ತದನಂತರದಲ್ಲಿ 1.0ರಷ್ಟು ಗರಿಷ್ಟ ಅನುಮತಿಸಬಹುದಾದ ನೆಲ ಪ್ರದೇಶದೊಂದಿಗೆ (ಎಫ್ಎಸ್ಐ) ₹ 12.07 ಕೋಟಿ[137] ಮೌಲ್ಯದ ಉಳಿಕೆ ಕಾಮಗಾರಿಗಾಗಿ ಅಂದಾಜನ್ನು ₹ 22.55 ಕೋಟಿ ಮೊತ್ತಕ್ಕೆ ಪರಿಷ್ಕರಿಸಿತು ಹಾಗೂ ಕಾಮಗಾರಿಯನ್ನು ಪುನರ್–ಪ್ರಾರಂಭಿಸುವ ಸಲುವಾಗಿ ಒಂದು ಹೊಸ ಕಾಮಗಾರಿ ಆದೇಶವನ್ನು ಡಿಸೆಂಬರ್ 2013ರಲ್ಲಿ (ನವೀ ಮುಂಬೈ ಮುನಿಸಿಪಲ್

ಕಂಪನಿಯು, ಟೆಂಡರುಗಳನ್ನು ಆಹ್ವಾನಿಸಿದನಂತರ ಕರ್ನಾಟಕ ಭವನ ನಿರ್ಮಾಣಕ್ಕಾಗಿ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯು ಯೋಜನೆಯ ಕಾರ್ಯಗತಗೊಳಿಸುವಿಕೆಯನ್ನು ಸ್ವಯಂ–ಆಯ್ಕೆ ಆಧಾರದ ಮೇರೆಗೆ ಸಮೀಕ್ಷಿಸಿದನಂತರ, ಇನ್ನಿತರವುಗಳ ಜೊತೆಗೆ, ಯಾವುದೇ ಸಮರ್ಥನೀಯ ಕಾರಣಗಳು ಇಲ್ಲದೆಯೇ ಹಾಗೂ ಸಕ್ಷಮ ಅಧಿಕಾರಿಗಳ ಅನುಮೋದನೆಗಳು ಇಲ್ಲದೆಯೇ ಅಧಿಕ ಮಟ್ಟದ ಗರಿಷ್ಟ ಅನುಮತಿಸಬಹುದಾದ ನೆಲ ಪ್ರದೇಶದೊಂದಿಗೆ (ಎಫ್ಎಸ್ಐ) ಕಟ್ಟಡದ ವಿನ್ಯಾಸವನ್ನು ಪರಿಷ್ಕರಿಸಿದ್ದಕ್ಕಾಗಿ ಹಾಗೂ ಕಟ್ಟಡ ನಿರ್ಮಾಣವನ್ನು ಪ್ರಸಕ್ತ ಇದ್ದಂತಹ ಪರಿಮಾಣಗಳ ಅನುಸಾರ ಕನಿಷ್ಠ ವೆಚ್ಚ/ಮೌಲ್ಯದಲ್ಲಿ ಪೂರ್ಣಗೊಳಿಸದಿರುವುದಕ್ಕಾಗಿ ಸಂಬಂಧಿತ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸುವಂತೆ ಶಿಫಾರಸು ಮಾಡಿರುವುದು (ಅಕ್ಟೋಬರ್ 2013).

[136] ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ ವಾಶಿಯಲ್ಲಿ ಪ್ರಸ್ತಾಪಿತ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ.

[137] ಮೂಲತಃ ಗುತ್ತಿಗೆಗೆ ನೀಡಲಾಗಿದ್ದ ಮೊತ್ತ ₹ 18.18 ಕೋಟಿ, ಅದರಿಂದ ಕಾರ್ಯಗತಗೊಳಿಸಲಾಗಿರುವ ಕಾಮಗಾರಿಗೆ ಸಂಬಂಧಿತ ಮೊತ್ತ ₹ 7.19 ಕೋಟಿ, ಅದಕ್ಕೆ ₹ 1.08 ಕೋಟಿ ಮೊತ್ತದಷ್ಟು ಹೆಚ್ಚುವರಿ ಕಾಮಗಾರಿಯನ್ನು ಕೂಡುವುದು.

ಕಾರ್ಪೊರೇಷನ್‌ಗೆ (ಎನ್‌ಎಂಎಂಸಿ) ಮಾಡಲಾದ ಕೋರಿಕೆಯನ್ನು ಅದು ತಿರಸ್ಕರಿಸಿದ 34 ತಿಂಗಳುಗಳು ಕಳೆದ ನಂತರ) ಅದೇ ಗುತ್ತಿಗೆದಾರರಿಗೆ (ಮೆ. ಕ್ಲಾಸಿಕ್ ಕನ್ಸ್‌ಟ್ರಕ್ಷನ್ಸ್ ಪ್ರೆವೇಟ್ ಲಿಮಿಟೆಡ್) ಕಾಮಗಾರಿಯು ಅಕ್ಟೋಬರ್ 2014ರ ವೇಳೆಗೆ ಪೂರ್ಣಗೊಳ್ಳತಕ್ಕದ್ದು ಎಂಬ ಷರತ್ತಿನೊಂದಿಗೆ ನೀಡಿತು. ಆದಾಗ್ಯೂ, ಕಾಮಗಾರಿಯು ಮಾರ್ಚ್ 2018ರಲ್ಲಿ ₹ 36.89 ಕೋಟಿ[138]ಮೊತ್ತದಷ್ಟು ಒಟ್ಟಾರೆ ವೆಚ್ಚದಲ್ಲಿ ಪೂರ್ಣಗೊಂಡಿತು. ಈ ರೀತಿಯಾಗಿ, ನಗರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತವು (ಸಿಐಡಿಸಿಒ) ನಿವೇಶನವನ್ನು ಹಂಚಿಕೆ ಮಾಡಿದ ದಿನಾಂಕದಿಂದ 18 ವರ್ಷಗಳು ಕಳೆದನಂತರ ಯೋಜನೆಯನ್ನು ಪೂರ್ಣಗೊಳಿಸಲಾಯಿತು.

ಲೆಕ್ಕಪರಿಶೋಧನೆಯು ಕರ್ನಾಟಕ ಭವನದ ಕಾರ್ಯಾಚರಣೆಗಳನ್ನು ಅದು ಭೌತಿಕವಾಗಿ ಪೂರ್ಣಗೊಂಡನಂತರ ಸಮೀಕ್ಷಿಸಿತು. ಗಮನಿಸಲಾದ ಅಂಶಗಳು ಕೆಳಗಿನಂತಿವೆ.

ಕಂಪನಿಯು ಪ್ರಸ್ತಾವನೆಗಾಗಿ ಕೋರಿಕೆಯನ್ನು ಆಹ್ವಾನಿಸಿದನಂತರ (ಜುಲೈ 2018) ಮೆ. ಆತಿಥೇಯ ಕ್ಷೇಮ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್ (ಪರವಾನಿಗೆದಾರರು), ಬೆಂಗಳೂರು, ಇವರೊಂದಿಗೆ ಕರ್ನಾಟಕ ಭವನದ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ 15 ವರ್ಷಗಳ ಗುತ್ತಿಗೆ ಅವಧಿಗಾಗಿ ಗುತ್ತಿಗೆ ಹಾಗೂ ಪರಿವಾನಿಗೆ ಒಡಂಬಡಿಕೆಯನ್ನು ಮಾಡಿಕೊಂಡಿತು (ಸೆಪ್ಟೆಂಬರ್ 2018). ಪರವಾನಿಗೆದಾರರು ತಿಂಗಳು ಒಂದಕ್ಕೆ ₹ 16.39 ಲಕ್ಷ ಮೊತ್ತದಷ್ಟು ಗುತ್ತಿಗೆ ಬಾಡಿಗೆಯನ್ನು ವಾರ್ಷಿಕವಾಗಿ ಶೇಕಡಾ 5ರಷ್ಟು ಹೆಚ್ಚಳಗೊಳಿಸುವ ಅನುವಿನೊಂದಿಗೆ ಪಾವತಿಸುವುದನ್ನು ಒಡಂಬಡಿಕೆಯು ನಿರ್ದಿಷ್ಟಪಡಿಸಿತ್ತು. ಕಂಪನಿಯು, ನಾಲ್ಕು ತಿಂಗಳುಗಳ ಅವಧಿಯ ಕಾರ್ಯಾಚರಣೆಯ ತಾತ್ಕಾಲಿಕ ತಡೆ ಅಂದರೆ ತಿಂಗಳ ಗುತ್ತಿಗೆ ಬಾಡಿಗೆಯನ್ನು ಪಾವತಿಸಬೇಕಿರದ ಅವಧಿಯು (ಮಾರಟೋರಿಯಂ ಪೀರಿಯೇಡ್) 1 ಏಪ್ರಿಲ್ 2019ರಿಂದ ಪ್ರಾರಂಭಗೊಳ್ಳುವುದೆಂಬುದನ್ನು ತಿಳಿಸುವುದರೊಂದಿಗೆ ಕಟ್ಟಡದ ಸ್ವಾಮ್ಯವನ್ನು ಫೆಬ್ರವರಿ 2019ರಲ್ಲಿ ಪರವಾನಿಗೆದಾರರಿಗೆ ವಹಿಸಿಕೊಟ್ಟಿತು.

ಕಟ್ಟಡದ ಒಳಾಂಗಣ ಅಲಂಕರಣಾ ಕಾಮಗಾರಿಗಳ[139] ಪೂರ್ಣಗೊಳ್ಳುವಿಕೆಗಾಗಿ ಪರವಾನಿಗೆದಾರರ ಕೋರಿಕೆಯ ಆಧಾರದ ಮೇರೆಗೆ ತಿಂಗಳ ಗುತ್ತಿಗೆ ಬಾಡಿಗೆಯನ್ನು ಪಾವತಿಸಬೇಕಿರದ ರೀತಿಯಲ್ಲಿ ಅವಧಿಯನ್ನು ಡಿಸೆಂಬರ್ 2019ರವರೆಗೂ ವಿಸ್ತರಿಸಲಾಯಿತು ಹಾಗೂ ತದನಂತರದಲ್ಲಿ ಅದನ್ನು ಏಪ್ರಿಲ್ 2020ರವರೆಗೂ ವಿಸ್ತರಿಸಲಾಯಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗುತ್ತಿಗೆ ಒಡಂಬಡಿಕೆಯ ಷರತ್ತುಗಳ (ಷರತ್ತು 3 ಮತ್ತು 3.1) ಉಲ್ಲಂಘನೆಯ ಹೊರತಾಗಿಯೂ, ಕಂಪನಿಯು ಪರವಾನಿಗೆದಾರರಿಗೆ ಮೂರು ತಿಂಗಳುಗಳ ನೋಟೀಸನ್ನು ನೀಡುವ ಮೂಲಕ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವ ಆಯ್ಕೆಯನ್ನು ಚಲಾಯಿಸಲಿಲ್ಲ. ಇದರ ಬದಲಾಗಿ, ವಿಸ್ತರಿಸಲಾದ ಅವಧಿಗೆ ತಿಂಗಳ ಗುತ್ತಿಗೆ ಬಾಡಿಗೆಯನ್ನು ಪಾವತಿಸಬೇಕಿರದ ಅವಧಿಯನ್ನು ನಿರ್ದಿಷ್ಟ ಅವಧಿಯನ್ನು ಮೀರಿದಂತೆ ಒಂಬತ್ತು ತಿಂಗಳುಗಳವರೆಗೆ (ಆಗಸ್ಟ್ 2019ರಿಂದ ಏಪ್ರಿಲ್ 2020) ವಿಸ್ತರಿಸಲಾಗಿತ್ತು. ಅದರಿಂದಾಗಿ, ಕಂಪನಿಯು ಆಗಸ್ಟ್ 2019 ಮತ್ತು ಏಪ್ರಿಲ್ 2020ರ ನಡುವಿನ ವಿಸ್ತರಿಸಲಾದ ಕಾರ್ಯಾಚರಣೆಯ ತಾತ್ಕಾಲಿಕ ತಡೆ ಅವಧಿಗೆ (ಮಾರೆಟೋರಿಯಮ್ ಪೀರಿಯೇಡ್) ಗುತ್ತಿಗೆ ಒಡಂಬಡಿಕೆಯ ಅನುಸಾರ ಸ್ವೀಕರಿಸಬೇಕಿದ್ದಂತಹ ₹ 1.31 ಕೋಟಿ[140] ಮೊತ್ತದಷ್ಟು ಗುತ್ತಿಗೆ ಬಾಡಿಗೆಯನ್ನು ಕಂಪನಿಯು ಕಳೆದುಕೊಂಡಿತ್ತಾದ್ದರಿಂದ ಪರವಾನಿಗೆದಾರರಿಗೆ ಅನುಕೂಲ ಕಲ್ಪಿಸಿಕೊಡಲಾಗಿತ್ತು. ಅಲ್ಲದೆಯೇ, ಕಂಪನಿಯು ವಿದ್ಯುಚ್ಛಕ್ತಿ ಶುಲ್ಕಗಳು, ಇತ್ಯಾದಿಗಳ ಮೇಲೆ ತಪ್ಪಿಸಬಹುದಾಗಿದ್ದಂತಹ ನಿರಂತರ

[138] ಭೂಮಿಯ ಮೌಲ್ಯ (₹ 76.90 ಲಕ್ಷ), ಹೆಚ್ಚುವರಿ ಗುತ್ತಿಗೆ ಪ್ರೀಮಿಯಂ, (₹ 1.66 ಕೋಟಿ) ಹಾಗೂ ನಿರ್ಮಾಣ ವೆಚ್ಚ ₹ 34.45 ಕೋಟಿ (ವಾಸ್ತುಶಿಲ್ಪಿಗಳ ಶುಲ್ಕ, ಯೋಜನಾ ನಿರ್ವಹಣಾ ಸಲಹಾ ಸಮಾಲೋಚನಾ ಶುಲ್ಕ, ಇತ್ಯಾದಿಗಳು ಒಳಗೊಂಡಂತೆ) ಒಳಗೊಂಡಿದ್ದು.

[139] ಗುತ್ತಿಗೆ ಹಾಗೂ ಪರವಾನಿಗೆ ಒಡಂಬಡಿಕೆಯ ಅನುಸಾರ, ಗುತ್ತಿಗೆದಾರರಿಗೆ ಕಟ್ಟಡದ ಒಳಗೆ ವ್ಯಾಪಾರವ್ಯವಹಾರದ ಉದ್ದೇಶಕ್ಕಾಗಿ ಪೀಠೋಪಕರಣಗಳು, ನೆಲೆವಸ್ತುಗಳು, ಉಪಕರಣಗಳು ಹಾಗೂ ಅನ್ವಯಗೊಳಿಸುವಿಕೆಗಳ ಅಳವಡಿಕೆಗಳನ್ನು ಒಳಗೊಂಡಂತೆ ನವೀಕರಣದ ಕಾಮಗಾರಿಗಳನ್ನು ಮಾಡಿಕೊಳ್ಳಲು ಅನುಮತಿಸಲಾಗಿತ್ತು.

[140] ಆಗಸ್ಟ್ 2019ರಿಂದ ಮಾರ್ಚ್ 2020ರ ಅವಧಿಗೆ ತಿಂಗಳು ಒಂದಕ್ಕೆ ₹ 16.39 ಲಕ್ಷ ದರದಲ್ಲಿ. ಕೋವಿಡ್ ಪ್ಯಾಂಡಮಿಕ್ ಕಾರಣ ನಷ್ಟವನ್ನು ಮಾರ್ಚ್ 2020ರವರೆಗೆ ಪರಿಮಿತಗೊಳಿಸಲಾಗಿದೆ.

ಶುಲ್ಕಗಳನ್ನು (₹ 46.54 ಲಕ್ಷ[141]) ಭರಿಸುವಂತಾಯಿತು, ಅದನ್ನು ಅನ್ಯಥಾ ಒಡಂಬಡಿಕೆಯ ಅನುಸಾರ (ಷರತ್ತು 5.2) ಪರವಾನಿಗೆದಾರರು ಪಾವತಿಸಬೇಕಿತ್ತು. ಪರವಾನಿಗೆದಾರರು ಕಾರ್ಯಾಚರಣೆಯ ತಾತ್ಕಾಲಿಕ ತಡೆ ಅವಧಿಯನ್ನು (ಮಾರೆಟೋರಿಯಮ್ ಪೀರಿಯೇಡ್) ಮೇ 2021ರವರೆಗೂ[142] ವಿಸ್ತರಿಸುವ ಸಲುವಾಗಿ ಕೋರಿಕೆಯನ್ನು ಸಲ್ಲಿಸಿದ್ದರು, ಇದರ ಬಗ್ಗೆ ತೀರ್ಮಾನವು ಜೂನ್ 2021ರಲ್ಲಿದ್ದಂತೆ ಬಾಕಿಯಿತ್ತು.

ಕಂಪನಿಯು ನವೀ ಮುಂಬೈ ಮುನಿಸಿಪಲ್ ಕಾರ್ಪೋರೇಷನ್‌ನ ಪೂರ್ವಾನುಮತಿ ಪಡೆದುಕೊಳ್ಳದೆಯೇ ಕಾಮಗಾರಿಯನ್ನು ಮಧ್ಯದಲ್ಲಿ ಸ್ಥಗಿತಗೊಳಿಸಿ 1.5ರಷ್ಟು ಗರಿಷ್ಠ ಅನುಮತಿಸಬಹುದಾದ ನೆಲ ಪ್ರದೇಶದೊಂದಿಗೆ (ಎಫ್‌ಎಸ್‌ಐ) ಕಟ್ಟಡದ ವಿನ್ಯಾಸವನ್ನು ಪರಿಷ್ಕರಿಸಿದ್ದರಿಂದ ಯೋಜನೆಯ ಕಾರ್ಯಗತಗೊಳಿಸುವಿಕೆ ಹಂತ ಹಾಗೂ ಕಾರ್ಯಾಚರಣೆ ಹಂತಗಳೆರಡರಲ್ಲೂ ವಿಫಲಗೊಂಡಿತ್ತು. ಇದರಿಂದಾಗಿ ಮೆ. ಕ್ಲಾಸಿಕ್ ಕನ್ಸ್‌ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಇವರೊಂದಿಗೆ ಮಾಡಿಕೊಳ್ಳಲಾಗಿದ್ದಂತಹ (ಮಾರ್ಚ್ 2008) ಒಡಂಬಡಿಕೆಯ ಅನುಸಾರ ನಿಗದಿತ ದಿನಾಂಕದಿಂದ ಯೋಜನೆಯು ಪೂರ್ಣಗೊಳ್ಳುವಲ್ಲಿ ಒಂಬತ್ತು ವರ್ಷಗಳ (ಮೇ 2009ರಿಂದ ಮಾರ್ಚ್ 2018) ವಿಳಂಬವಾಗಿತ್ತು. ವಿಳಂಬವು ಗುತ್ತಿಗೆದಾರರಿಗೆ ₹ 1.95 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದಂತಹ ಪರಿಹಾರವನ್ನೂ ಒಳಗೊಂಡಂತೆ ದರ ಹೆಚ್ಚಳದಲ್ಲಿ ಪರಿಣಮಿಸಿತು. ಮುಂದುವರೆದು, ಕಂಪನಿಯು ಗುತ್ತಿಗೆ ಅವಧಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಅವಧಿಯನ್ನೂ ಮೀರಿದಂತೆ ಕಾರ್ಯಾಚರಣೆಯ ತಾತ್ಕಾಲಿಕ ತಡೆ ಅವಧಿಯನ್ನು (ಮಾರೆಟೋರಿಯಮ್ ಪೀರಿಯೇಡ್) ವಿಸ್ತರಿಸಿದ ಕಾರಣ ₹ 1.31 ಕೋಟಿ ಮೊತ್ತದಷ್ಟು ಗುತ್ತಿಗೆ ಬಾಡಿಗೆಯನ್ನು ಕಳೆದುಕೊಂಡಿತು. ಪರವಾನಿಗೆದಾರರು ಕಾರ್ಯಾಚರಣೆಯ ತಾತ್ಕಾಲಿಕ ತಡೆ ಅವಧಿಯನ್ನು (ಮಾರೆಟೋರಿಯಮ್ ಪೀರಿಯೇಡ್) ಮೇ 2021ರವರೆಗೂ ವಿಸ್ತರಿಸುವ ಸಲುವಾಗಿ ಕೋರಿರುವುದರಿಂದ, ಕಂಪನಿಯು ಜೂನ್ 2020ರಿಂದ ಮೇ 2021ರ[143] ಅವಧಿಯಲ್ಲಿಯೂ ₹ 1.97 ಕೋಟಿ ಮೊತ್ತದಷ್ಟು ಗುತ್ತಿಗೆ ಬಾಡಿಗೆಯನ್ನು ಕಳೆದುಕೊಳ್ಳುವ ಸಂಭಾವ್ಯತೆಯಿರುತ್ತದೆ.

ಕರ್ನಾಟಕ ಭವನ ಅತಿಥಿ ಗೃಹದ ಕಾರ್ಯಾಚರಣೆಗಳು ಪ್ರಾರಂಭಗೊಳ್ಳದಿರುವುದರಿಂದ (ಜೂನ್ 2021) ₹ 36.89 ಕೋಟಿ ಮೊತ್ತದಷ್ಟು ಸಂಪೂರ್ಣ ಹೂಡಿಕೆಯು ಯೋಜನೆಯು ಪೂರ್ಣಗೊಂಡಾಗಿನಿಂದ (ಮಾರ್ಚ್ 2018) ಕಳೆದ 39 ತಿಂಗಳುಗಳಿಗೆ ಯಾವುದೇ ಪ್ರತಿಫಲಗಳಿಲ್ಲದೆಯೇ ನಿಷ್ಫಲವಾಗಿ ಉಳಿದಿತ್ತು. ಅಲ್ಲದೆಯೇ, ಕರ್ನಾಟಕ ಭವನದ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಉದ್ದೇಶಗಳು, ಅವೆಂದರೆ, ಅತಿಥಿ ಕೊಠಡಿಗಳನ್ನು ಒದಗಿಸುವುದು, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಕೇಂದ್ರ, ಕಲಾ ಗ್ಯಾಲರಿ, ವಸ್ತುಪ್ರದರ್ಶನ ಕೇಂದ್ರ, ಕರ್ನಾಟಕದ ವಿಶೇಷ ಆಹಾರಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಳಿಗೆಗಳು, ಕರ್ನಾಟಕದ ಉತ್ಪನ್ನಗಳ ಪ್ರದರ್ಶನ, ಇತ್ಯಾದಿಗಳನ್ನು ಜೂನ್ 2000ರಲ್ಲಿ ನಿವೇಶನವನ್ನು ಸ್ವಾಧೀನಕ್ಕೆ ತೆಗೆದುಕೊಂಡು 21 ವರ್ಷಗಳು ಕಳೆದರೂ ಸಾಧಿಸಲಾಗಿರುವುದಿಲ್ಲ.

ಗುತ್ತಿಗೆದಾರರಿಗೆ ಪಾವತಿಸಲಾದ ₹ 1.95 ಕೋಟಿ ಮೊತ್ತದಷ್ಟು ಪರಿಹಾರವು ಪ್ರಾಮಾಣಿಕ ಉದ್ದೇಶದಿಂದ ಕೂಡಿತ್ತೇ ಹೊರತು ಉದ್ದೇಶಪೂರ್ವಕವಾಗಿ ಆಗಿರಲಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2021). ಕಾರ್ಯವಿಧಾನಗಳ ಕಾದಾಟಗಳು ವಿಳಂಬಕ್ಕೆ ಕಾರಣವಾದವು. ಬಾಡಿಗೆಯನ್ನು ಜನವರಿ 2022ರಿಂದ ವಸೂಲಿ ಮಾಡಲು ಹಾಗೂ ಅಲ್ಲದೆಯೇ ಬಾಡಿಗೆಯ ಸಂಪೂರ್ಣ ಬಾಕಿಗಳನ್ನು ಬಡ್ಡಿಯ ಜೊತೆಯಲ್ಲಿ ಗುತ್ತಿಗೆದಾರರಿಂದ ನಿಯತ ತಿಂಗಳ ಗುತ್ತಿಗೆ ಬಾಡಿಗೆಯ ಜೊತೆಯಲ್ಲಿ ತಿಂಗಳು ಒಂದಕ್ಕೆ ₹ 4.00 ಲಕ್ಷ ಮೊತ್ತದಂತೆ ಹಂತಾನುಹಂತವಾಗಿ ವಸೂಲಾತಿ ಮಾಡಲು ನಿರ್ದೇಶಕರುಗಳ ಮಂಡಳಿಯು ತನ್ನ ತೀರ್ಮಾನವನ್ನು ತೆಗೆದುಕೊಂಡಿದೆ (ಸೆಪ್ಟಂಬರ್ 2021).

---

[141] ಭದ್ರತೆ ಹಾಗೂ ವಿದ್ಯುಚ್ಛಕ್ತಿಯ ಕಡೆಗೆ ಕಂಪನಿಯು ಅಕ್ಟೋಬರ್ 2018ರಿಂದ ಅಕ್ಟೋಬರ್ 2019ರ ಅವಧಿಗೆ ಪಾವತಿಸಿರುವ ವಾಸ್ತವಿಕ ಮೊತ್ತವನ್ನು ಪ್ರತಿನಿಧಿಸುತ್ತದೆ. ಒಡಂಬಡಿಕೆಯು ಭದ್ರತಾ ಶುಲ್ಕಗಳ ಬಗ್ಗೆ ಮೌನವಾಗಿದೆ. ಆದಾಗ್ಯೂ ಕಂಪನಿಯು ಈ ನಿಟ್ಟಿನಲ್ಲಿ ₹ 25.59 ಲಕ್ಷ ಮೊತ್ತವನ್ನು ಪಾವತಿಸಿದೆ.

[142] ಮೂಲ: ನವಂಬರ್ 2020ರಲ್ಲಿ ನಡೆದಂತಹ ಲೆಕ್ಕಪರಿಶೋಧನಾ ಸಮಿತಿಯ ಸಭೆಯ ಹಾಗೂ ಮಾರ್ಚ್ 2021ರಲ್ಲಿ ನಡೆದಂತಹ ನಿರ್ದೇಶಕರುಗಳ ಮಂಡಳಿಯ ಸಭೆಯ ನಡಾವಳಿಗಳು.

[143] ರಾಷ್ಟ್ರವ್ಯಾಪಿ ಲಾಕ್‌ಡೌನ್ ಕಾರಣದಿಂದಾಗಿ ಏಪ್ರಿಲ್ 2020 ಮತ್ತು ಮೇ 2020ನ್ನು ಪರಿಗಣಿಸಿರುವುದಿಲ್ಲ.

ನವೀ ಮುಂಬೈ ಮುನಿಸಿಪಲ್ ಕಾರ್ಪೊರೇಷನ್‌ನ ಪೂರ್ವಾನುಮತಿಯನ್ನು ಪಡೆಯದೆಯೇ, ಕಾಮಗಾರಿಗಳು ನಡೆಯುತ್ತಿರುವಾಗ ಮಧ್ಯದಲ್ಲಿ ಸ್ಥಗಿತಗೊಳಿಸಿ ಕಟ್ಟಡದ ವಿನ್ಯಾಸವನ್ನು ಮಾರ್ಪಾಡು ಮಾಡಿದ್ದು ಯೋಜನೆಯು ಪೂರ್ಣಗೊಳ್ಳುವಲ್ಲಿ ಸಮರ್ಥನೀಯವಲ್ಲದ ವಿಳಂಬಗಳಿಗೆ ಕಾರಣವಾಯಿತು ಎಂಬ ವಾಸ್ತವಾಂಶವು ಉಳಿದುಕೊಳ್ಳುತ್ತದೆ. ಬಾಕಿಗಳ ವಸೂಲಾತಿಗಾಗಿ ನಿರ್ದೇಶಕರುಗಳ ಮಂಡಳಿಯು ತೆಗೆದುಕೊಂಡಿರುವ ತೀರ್ಮಾನವು ಗುತ್ತಿಗೆದಾರರ ಒಪ್ಪಿಗೆಯ ಷರತ್ತಿಗೆ ಒಳಪಟ್ಟಿರುತ್ತದೆ.

**ಯೋಜನೆಯ ಕಾರ್ಯಗತಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಹಾಗೂ ಗುತ್ತಿಗೆ ಷರತ್ತುಗಳ ಅನುಸಾರ ಅದರ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಒಂದು ಸಮರ್ಪಕ ನಿಯಂತ್ರಣಾ ವ್ಯವಸ್ಥೆಯನ್ನು ಕಂಪನಿಯು ಸ್ಥಾಪಿಸತಕ್ಕದ್ದು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ. ಕಂಪನಿಯು, ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ವರಮಾನ ನಷ್ಟಗಳನ್ನು ತಪ್ಪಿಸುವ ಸಲುವಾಗಿ, ಗುತ್ತಿಗೆ ಒಡಂಬಡಿಕೆಯ ಅನುಸಾರ ಗುತ್ತಿಗೆದಾರರಿಂದ ನ್ಯಾಯಸಮ್ಮತ ಗುತ್ತಿಗೆ ಬಾಡಿಗೆಯನ್ನು ವಸೂಲಾತಿ ಮಾಡಲು ಅಥವಾ ಗುತ್ತಿಗೆ ಒಡಂಬಡಿಕೆಯನ್ನು ರದ್ದುಗೊಳಿಸುವ ಸಲುವಾಗಿ ಹಾಗೂ ಕಟ್ಟಡವನ್ನು ಮತ್ತೋರ್ವರಿಗೆ ಪುನರ್-ಗುತ್ತಿಗೆಗೆ ನೀಡಲು ತತ್‌ಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯು ಶಿಫಾರಸು ಮಾಡಿರುವಂತೆ, ಕಂಪನಿಯು ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿನ ಲೋಪದೋಷಗಳಿಗೆ ಕಾರಣಕರ್ತರಾಗಿರುವಂತಹ ಸಂಬಂಧಿತ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ಸಹ ನಿಗದಿಪಡಿಸಬೇಕು.**

**ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

## *2.4. ನಿಷ್ಫಲ ವೆಚ್ಚ*

**ಮಾರುಕಟ್ಟೆಯಲ್ಲಿ ಉತ್ಪನ್ನಕ್ಕೆ ಇರುವಂತಹ ಬೇಡಿಕೆಯನ್ನು ನಿರ್ಧಾರಣೆ ಮಾಡದೆಯೇ 'ಸೌಂದರ್ಯ' ಎಂಬ ಬ್ರಾಂಡ್ ಹೆಸರಿನ ಅಡಿಯಲ್ಲಿ ಒಂದು ಹೊಸ ಉತ್ಪನ್ನವನ್ನು ಮಾರುಕಟ್ಟೆಗೆ ಪರಿಚಯಿಸಿದ್ದು ಹಾಗೂ ವಿವಿಧ ಶಾಸನಬದ್ಧ ಅನುವುಗಳನ್ನು ಹಾಗೂ ಗುತ್ತಿಗೆ ಒಡಂಬಡಿಕೆಗಳನ್ನು ಉಲ್ಲಂಘಿಸಿದ್ದು ₹ 68.88 ಲಕ್ಷ ಮೊತ್ತದಷ್ಟು ವೆಚ್ಚವನ್ನು ನಿಷ್ಫಲಗೊಳಿಸಿತು.**

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್[144] (ಕಂಪನಿ) ತನ್ನ ಉತ್ಪನ್ನ ಸಾಲನ್ನು ಬಲಗೊಳಿಸುವ ಉದ್ದೇಶದಿಂದ ತನ್ನದೇ ಆದಂತಹ ನಿರ್ದಿಷ್ಟ ವ್ಯಾಪಾರ ಮುದ್ರಿಕೆ ಹೆಸರಿನಲ್ಲಿ ಅದೆಂದರೆ 'ಸೌಂದರ್ಯ' ಎಂಬ ಹೆಸರಿನಿಂದ ಔಷಧೀಯ ಮೂಲಿಕೆಗಳ ಸೋಪುಗಳು ಮತ್ತು ಇತರೆ ವೈಯಕ್ತಿಕ ನೈರ್ಮಲ್ಯ ಸಂರಕ್ಷಣಾ ಉತ್ಪನ್ನಗಳನ್ನು (ಪರ್ಸನಲ್ ಕೇರ್ ಪ್ರಾಡಕ್ಟ್ಸ್) ಮಾರುಕಟ್ಟೆಗೆ ಪರಿಚಯಿಸುವುದನ್ನು ಚಿಂತಿಸಿತು (ಜುಲೈ 2016). ಮೇಲೆ ತಿಳಿಸಲಾದಂತಹ ತೀರ್ಮಾನದ ಅನುಸಾರ, ಈ ಉತ್ಪನ್ನಕ್ಕಾಗಿ ಮಾರುಕಟ್ಟೆಯಲ್ಲಿ ಇರಬಹುದಾದಂತಹ ಬೇಡಿಕೆಯ ಬಗ್ಗೆ ಒಂದು ಅಧ್ಯಯನವನ್ನು ಒಂದು ವೃತ್ತಿಪರ ಸಂಸ್ಥೆಯಿಂದ ನಡೆಸುವಂತೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರವರು ಕಂಪನಿಯ ಗ್ರಾಹಕ ಉತ್ಪನ್ನ ವಿಭಾಗಕ್ಕೆ ನಿರ್ದೇಶಿಸಿದರು (ಸೆಪ್ಟೆಂಬರ್ 2016). ಕಂಪನಿಯು ತನ್ನ ಉದ್ಯೋಗಿಗಳು ಮತ್ತು ಗ್ರಾಹಕರಿಗೆ ಔಷಧೀಯ ಮೂಲಿಕೆಗಳ ಉತ್ಪನ್ನಗಳ[145] ಮಾದರಿಗಳನ್ನು ವಿತರಿಸುವ ಮೂಲಕ ಮಾದರಿ ಆಯ್ಕೆ ಸಮೀಕ್ಷೆಯನ್ನು ಮಾಡಿದ ನಂತರ, 'ಸೌಂದರ್ಯ' ತನ್ನದೇ ಆದಂತಹ ನಿರ್ದಿಷ್ಟ ವ್ಯಾಪಾರ ಮುದ್ರಿಕೆ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸುವ ಸಲುವಾಗಿ ಔಷಧೀಯ ಮೂಲಿಕೆಗಳ ಮೈ ಸೋಪುಗಳು (10 ಮಾದರಿಗಳು), ಔಷಧೀಯ ಮೂಲಿಕೆಗಳ ಬಾಡಿ ವಾಶ್, ಫೇಸ್ ವಾಶ್ ಹಾಗೂ ಔಷಧೀಯ ಮೂಲಿಕೆಗಳ ಶಾಂಪೂಗಳನ್ನು (ಮೂರು ಮಾದರಿಗಳು) ತಯಾರಿಸುವ ಹಾಗೂ

[144] ಕಂಪನಿಯು ಒಂದು ರಾಜ್ಯ ಸರ್ಕಾರದ ಸಾರ್ವಜನಿಕ ವಲಯ ಉದ್ದಿಮೆಯಾಗಿದ್ದು, ವಿವಿಧ ಉತ್ಪನ್ನಗಳ ಮಾರಾಟ ಹಾಗೂ ಸೇವೆಗಳನ್ನು ಒದಗಿಸುವ (ಚಿಟ್ ಫಂಡ್, ಪಾನೀಯಗಳು, ಕಾಗದ, ಗ್ರಾಹಕರು ಬಳಸು ಉತ್ಪನ್ನಗಳು, ಇತ್ಯಾದಿ) ಮಾರಾಟ ಸಂಸ್ಥೆಯಾಗಿರುತ್ತದೆ.

[145] ಕಂಪನಿಯು ಉತ್ಪನ್ನ ಸೂತ್ರ (ಫಾರ್ಮುಲ) ಅಭಿವೃದ್ಧಿ ಹಾಗೂ ಜಾಹೀರಾತಿನ ಕಡೆಗೆ ₹ 9.47 ಲಕ್ಷ ಮೊತ್ತವನ್ನು ಭರಿಸಿದೆ.

ಸರಬರಾಜು ಮಾಡುವ ಸಲುವಾಗಿ ಐಟಂವಾರು ದರಗಳ ಆಧಾರದ ಮೇರೆಗೆ ಟೆಂಡರನ್ನು ಆಹ್ವಾನಿಸಿತು (ಅಕ್ಟೋಬರ್ 2016).

ದರ ಸಂಧಾನಗಳನ್ನು ನಡೆಸಿದನಂತರ, ಗುತ್ತಿಗೆ ನೀಡಿಕೆ ಪತ್ರಗಳನ್ನು ಮೆ. ವಿನೋದ್ ಕುಮಾರ್ ಅಂಡ್ ಬ್ರದರ್ಸ್ ಪ್ರೈವೇಟ್ ಲಿಮಿಟೆಡ್ (ಮೆ ವಿಕೆಬಿಪಿಎಲ್), ಇವರಿಗೆ ಔಷಧೀಯ ಮೂಲಿಕೆಗಳ ಸೋಪ್ ಸರಬರಾಜಿಗಾಗಿ (10 ಮಾದರಿಗಳು) ಮತ್ತು ಬಾಡಿ ಮತ್ತು ಫೇಸ್ ವಾಶ್ (ಎರಡು ಮಾದರಿಗಳು) ಸರಬರಾಜಿಗಾಗಿ ಹಾಗೂ ಮೆ. ಮ್ಯಾಟ್‌ಕ್ಸಿನ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ (ಮೆ. ಎಂಎಲ್‌ಪಿಎಲ್), ಇವರಿಗೆ ಶ್ಯಾಂಪುಗಳ ಮೂರು ಮಾದರಿಗಳ[146] ಸರಬರಾಜಿಗಾಗಿ ನೀಡಲಾಯಿತು (ಜನವರಿ 2017).

ತದನಂತರದಲ್ಲಿ, ಏಪ್ರಿಲ್ 2017ರಲ್ಲಿ ಟೆಂಡರಿನ ಭಾಗವಾಗಿರದ 21 ಹೆಚ್ಚುವರಿ ಮಾದರಿಗಳನ್ನು (ಪಾರದರ್ಶಕ ಮೈ ಸೋಪುಗಳು ಹಾಗೂ ಇತರೆ ವೈಯಕ್ತಿಕ ನೈರ್ಮಲ್ಯ ಸಂರಕ್ಷಣಾ ಉತ್ಪನ್ನಗಳನ್ನು (ಪರ್ಸನಲ್ ಕೇರ್ ಪ್ರಾಡಕ್ಟ್ಸ್) ಖರೀದಿಸುವ ತೀರ್ಮಾನ ಮಾಡಿತು. ಅದರಂತೆಯೇ, ಕಂಪನಿಯು 33 ಮಾದರಿಗಳನ್ನು (21 ಹೆಚ್ಚುವರಿ ಮಾದರಿಗಳನ್ನು ಒಳಗೊಂಡಂತೆ) ತಯಾರಿಸುವುದು ಹಾಗೂ ಸರಬರಾಜು ಮಾಡುವ ಸಲುವಾಗಿ ಮೆ. ವಿಕೆಬಿಪಿಎಲ್, ಇವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿತು (ಮೇ 2017) ಹಾಗೂ ಈ ನಿಟ್ಟಿನಲ್ಲಿ ₹ 2 ಕೋಟಿ ಮೊತ್ತಕ್ಕೆ ಖರೀದಿ ಆದೇಶವನ್ನು ನೀಡಿತು (ಮೇ 2017).

ಮುಂದುವರೆದು, ಕಂಪನಿಯು ಮೆ. ವಿಕೆಬಿಪಿಎಲ್, ಇವರಿಗೆ ನೀಡಿದ್ದಂತಹ 33 ಮಾದರಿಗಳ ಖರೀದಿ ಆದೇಶಗಳ ಪೈಕಿ ₹ 60.32 ಲಕ್ಷ ಮೌಲ್ಯದ 19 ಮಾದರಿಗಳ ಪ್ರಾರಂಭಿಕ ಸರಬರಾಜಿಗಾಗಿ ಕೋರಿಕೆ ಪತ್ರವನ್ನು ನೀಡಿತು (ಜನವರಿ 2018). ಅದಕ್ಕೆ ಪ್ರತಿಯಾಗಿ ಮೆ. ವಿಕೆಬಿಪಿಎಲ್, ಇವರು ₹ 39.53 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಸರಬರಾಜು ಮಾಡಿದರು (ಜುಲೈ 2018), ಮೆ. ವಿಕೆಬಿಪಿಎಲ್, ಇವರು ಸರಬರಾಜು ಮಾಡಿದ ₹ 9.97 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಕಂಪನಿಯು ಮಾರಾಟಗಳ ಪ್ರೋತ್ಸಾಹಕವನ್ನಾಗಿ ವಿತರಿಸಿತು ಹಾಗೂ ₹ 1.89 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಅವುಗಳ ಉಪಯೋಗಿಸಬಹುದಾದ ಅವಧಿಯು (ಶೆಲ್ಫ್ ಲೈಫ್) ಮುಕ್ತಾಯಗೊಳ್ಳುವುದಕ್ಕೆ ಮುಂಚಿತವಾಗಿ (ಮೇ/ಜೂನ್ 2019) ಮಾರಾಟ ಮಾಡಲಾಯಿತು. ₹ 27.67 ಲಕ್ಷ ಮೌಲ್ಯದ ಉಳಿಕೆ ದಾಸ್ತಾನು ಮಾರಾಟವಾಗದೇ ಉಳಿದಿತ್ತು ಹಾಗೂ ಅವುಗಳ ಉಪಯೋಗಿಸಬಹುದಾದ ಅವಧಿಯು ಮುಕ್ತಾಯಗೊಂಡಿತ್ತು.

ಈ ಸಂಬಂಧವಾಗಿ, ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು (ಫೆಬ್ರವರಿ 2021) :

i. ಕಂಪನಿಯು, ಟೆಂಡರುಗಳನ್ನು ಆಹ್ವಾನಿಸುವ ಮೊದಲು, ಉತ್ಪನ್ನಗಳಿಗಾಗಿನ ಬೇಡಿಕೆಯ ಒಂದು ಉತ್ತಮ ಚಿತ್ರಣವನ್ನು ನೀಡಬಹುದಾಗಿದ್ದ ರೀತಿಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು ನಿರ್ದೇಶಿಸಿದ್ದಂತೆ ಮಾರುಕಟ್ಟೆ ಅಧ್ಯಯನವನ್ನು ಕೈಗೊಳ್ಳುವ ಬದಲು ಕೇವಲ ತನ್ನ ಉದ್ಯೋಗಿಗಳು ಮತ್ತು ಗ್ರಾಹಕರಿಗೆ ಔಷಧಿಯ ಮೂಲಿಕೆಗಳ ಉತ್ಪನ್ನಗಳನ್ನು ಹಂಚುವ ಮೂಲಕ ನಡುವೆ ಒಂದು ಮಾದರಿ ಆಯ್ಕೆಯ ಅನುಸಾರವಷ್ಟೇ ಸಮೀಕ್ಷೆಯನ್ನು ನಡೆಸಿತು. ಮೆ. ವಿಕೆಬಿಪಿಎಲ್ ಸರಬರಾಜು ಮಾಡಿದ ಸರಬರಾಜುಗಳ ಪೈಕಿ, ಕಂಪನಿಯು ₹ 9.97 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಮಾರಾಟಗಳ ಪ್ರೋತ್ಸಾಹಕವನ್ನಾಗಿ ವಿತರಿಸಿತು ಹಾಗೂ ಕೇವಲ ₹ 1.89 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಅವುಗಳ ಉಪಯೋಗಿಸಬಹುದಾದ ಅವಧಿಯು (ಶೆಲ್ಫ್ ಲೈಫ್) ಮುಕ್ತಾಯಗೊಳ್ಳುವುದಕ್ಕೆ ಮುಂಚಿತವಾಗಿ (ಮೇ/ಜೂನ್ 2019) ಮಾರಾಟ ಮಾಡಲಾಯಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ii. ಕರ್ನಾಟಕ ಸಾರ್ವಜನಿಕ ಖರೀದಿಗಳು/ಸೇವೆಗಳನ್ನು ಪಡೆದುಕೊಳ್ಳುವಿಕೆಯಲ್ಲಿ ಪಾರದರ್ಶಕತೆ ನಿಯಮಗಳು, 2000ದ ನಿಯಮ 12(3)ರ ಅನುಸಾರ, ಟೆಂಡರುದಾರರ ಗುತ್ತಿಗೆ

[146] ಕಂಪನಿಯು ಮೆ. ಎಂಎಲ್‌ಪಿಎಲ್‌ಗೆ ನೀಡಿದ್ದ ಗುತ್ತಿಗೆ ನೀಡಿಕೆ ಪತ್ರಗಳ ಬಗ್ಗೆ ದಾಖಲೆಗಳಲ್ಲಿ ಯಾವುದೇ ಕಾರಣಗಳು ಇಲ್ಲದೆಯೇ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ.

ಕಾರ್ಯನಿರ್ವಹಣೆಯ ಒಂದು ಖಾತರಿಗಾಗಿ ಯಶಸ್ವಿ ಟೆಂಡರುದಾರರಿಂದ ಭದ್ರತಾ ಠೇವಣಿಯನ್ನು ಪಡೆದುಕೊಳ್ಳಬೇಕಿತ್ತು. ಆದಾಗ್ಯೂ, ಗುತ್ತಿಗೆ ಕಾರ್ಯನಿರ್ವಹಣೆಯ ಖಚಿತಪಡಿಸಿಕೊಳ್ಳುವಿಕೆಗಾಗಿ ಯಶಸ್ವಿ ಸವಾಲುದಾರರುಗಳಿಂದ ಭದ್ರತಾ ಠೇವಣಿಯನ್ನು ಪಡೆದುಕೊಂಡಿದ್ದಕ್ಕಾಗಿ ಯಾವುದೇ ದಾಖಲೆಗಳ ಸಾಕ್ಷ್ಯಾಧಾರಗಳು ಇರಲಿಲ್ಲ, ಹೀಗಾಗಿ ಮೇಲೆ ತಿಳಿಸಲಾದಂತಹ ನಿಯಮಗಳನ್ನು ಉಲ್ಲಂಘಿಸಲಾಗಿತ್ತು. ಭದ್ರತೆಯ ಅನುಪಸ್ಥಿತಿಯಲ್ಲಿ, ಸರಬರಾಜುದಾರರು ತಮ್ಮ ಸರಬರಾಜಿನಲ್ಲಿ ತಪ್ಪಿತಸ್ತಗೊಂಡಿದ್ದರೂ ಸಹ ನಷ್ಟಗಳನ್ನು/ಹಾನಿಯಾಗಿರುವವುಗಳನ್ನು ವಸೂಲಾತಿ ಮಾಡುವ ಸಲುವಾಗಿ ಕಂಪನಿಯು ಯಾವುದೇ ಮಾರ್ಗಗಳನ್ನೂ ಉಳಿಸಿಕೊಂಡಿರಲಿಲ್ಲ, ಮೆ. ವಿಕೆಬಿಪಿಎಲ್ ₹ 60.32 ಲಕ್ಷ ಮೌಲ್ಯದ 19 ಮಾದರಿಗಳ ಸರಬರಾಜಿಗಾಗಿ ಮಾಡಲಾಗಿದ್ದ ಕೋರಿಕೆಗಳಿಗೆ ಪ್ರತಿಯಾಗಿ ಕೇವಲ ₹ 25.30 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಸರಬರಾಜು ಮಾಡಿದ್ದರು.

iii. ಒಡಂಬಡಿಕೆಯ ಅನುಸಾರ, ಕಂಪನಿಯ ಉಗ್ರಾಣಗಳಿಗೆ ಸಾಮಗ್ರಿಗಳನ್ನು ತಲುಪಿಸಿದ ದಿನಾಂಕದಿಂದ 31ನೇ ದಿನದಂದು ಕಂಪನಿಯು ಸರಬರಾಜುದಾರರಿಗೆ ಪಾವತಿಯನ್ನು ಮಾಡಬೇಕಿತ್ತು. ಆದಾಗ್ಯೂ, ಕಂಪನಿಯು ಒಡಂಬಡಿಕೆಯನ್ನು ಉಲ್ಲಂಘಿಸಿ, ಭವಿಷ್ಯದ ದಿನಾಂಕಗಳ ಚೆಕ್ಕುಗಳ ಭದ್ರತೆಯ ಪ್ರತಿಯಾಗಿ ಆದೇಶ ನೀಡಲಾಗಿದ್ದಂತಹ ಮೌಲ್ಯದ ಶೇಕಡಾ 25ಕ್ಕೆ ಸಮನಾಗಿ ₹ 50 ಲಕ್ಷ ಮೊತ್ತದಷ್ಟು ಮುಂಗಡ ಪಾವತಿ ಮಾಡಿತು (ಮೇ/ಜೂನ್ 2017) ಹಾಗೂ ಅಚ್ಚು, ಬಣ್ಣಗಳು ಹಾಗೂ ವಿನ್ಯಾಸ/ಪ್ಲೇಟುಗಳ ವೆಚ್ಚಗಳನ್ನು ಭರಿಸುವ ಸಲುವಾಗಿ ₹ 21.27 ಲಕ್ಷ ಮೊತ್ತದ ಒಂದು ಹೆಚ್ಚುವರಿ ಮುಂಗಡವನ್ನು ಪಾವತಿಸಿತು. ಮುಂದುವರೆದು, ಬ್ಯಾಂಕು ಖಾತರಿಯ ಬದಲಾಗಿ ಭವಿಷ್ಯದ ದಿನಾಂಕಗಳ ಚೆಕ್ಕುಗಳ ಪ್ರತಿಯಾಗಿ ಮುಂಗಡ ಹಣಕಾಸನ್ನು ಬಿಡುಗಡೆ ಮಾಡುವುದು ಸಾಮಾನ್ಯ ಹಣಕಾಸು ನಿಯಮಗಳ ಹಾಗೂ ಕರ್ನಾಟಕ ಸರ್ಕಾರವು ನಿರ್ದಿಷ್ಟಪಡಿಸಿದ್ದ ಪ್ರಮಾಣಕ ಟೆಂಡರು ದಾಖಲೆಗಳಲ್ಲಿನ[147] ಷರತ್ತುಗಳ ಮಾರ್ಗಾಂತರಣವಾಗಿತ್ತು. ಬ್ಯಾಂಕು ಖಾತರಿಗಳನ್ನು ಪಡೆದುಕೊಳ್ಳದೆಯೇ ಮುಂಗಡ ಪಾವತಿಗಳನ್ನು ಮಾಡುವುದು ಕೇಂದ್ರ ವಿಚಕ್ಷಣ/ಜಾಗೃತ ಆಯೋಗವು ನೀಡಿರುವ (ಫೆಬ್ರವರಿ 2011) ಮಾರ್ಗಸೂಚಿಗಳ ಉಲ್ಲಂಘನೆ ಕೂಡ ಆಗಿತ್ತು.

iv. ಮೆ. ವಿಕೆಬಿಪಿಎಲ್ ಕಂಪನಿಯು ಸರಬರಾಜು ಮಾಡಿದ್ದ (18 ಜುಲೈ 2018 ದಿನಾಂಕದ ಇನ್ವಾಯ್ಸ್ ಮೂಲಕ) ₹ 39.53 ಲಕ್ಷ ಮೌಲ್ಯದ ಸಾಮಗ್ರಿಗಳು, ಕಂಪನಿಯು ಸರಬರಾಜು ಮಾಡಲು ಕೋರಿರದ[148] ₹ 14.23 ಲಕ್ಷ ಮೌಲ್ಯದ ಉತ್ಪನ್ನಗಳನ್ನೂ ಒಳಗೊಂಡಿತ್ತು. ಸರಬರಾಜು ಮಾಡಲು ಕೋರಿರದ ಉತ್ಪನ್ನಗಳ ಸರಬರಾಜಿನ ಬಗ್ಗೆ ಕಂಪನಿಯು ಮೆ. ವಿಕೆಬಿಪಿಎಲ್‌ಗೆ 25 ಅಕ್ಟೋಬರ್ 2018ರಂದು ತಿಳಿಸಿತು, ಇದಕ್ಕೆ ಸರಬರಾಜುದಾರರು ಒಡಂಬಡಿಕೆಯ ಷರತ್ತು 11ರ ಅನುಸಾರ ಉತ್ಪನ್ನಗಳನ್ನು ವಿತರಣೆ ಮಾಡಿದ ದಿನಾಂಕದಿಂದ ಏಳು ದಿನಗಳ ಒಳಗೆ ಅಂತಹ ಲೋಪದೋಷಗಳನ್ನು ಗಮನಕ್ಕೆ ತರಬೇಕಿತ್ತು ಎಂಬುದಾಗಿ ನಕಾರಾತ್ಮಕವಾಗಿ ತಿಳಿಸಿದರು. ಉತ್ಪನ್ನಗಳ ವಿತರಣೆಯನ್ನು ಪಡೆದುಕೊಂಡ ದಿನಾಂಕದಿಂದ ಏಳು ದಿನಗಳಿಗೆ ಪ್ರತಿಯಾಗಿ 99 ದಿನಗಳು ಕಳೆದನಂತರ ಸರಬರಾಜು ಮಾಡಲು ಕೋರಿರದ ಉತ್ಪನ್ನಗಳ ಸರಬರಾಜಿನ ಬಗ್ಗೆ ಕಂಪನಿಯು ಸರಬರಾಜುದಾರರಿಗೆ ಮಾಹಿತಿಯನ್ನು ನೀಡಿತ್ತಾದ್ದರಿಂದ, ಅದು ₹ 14.23 ಲಕ್ಷ ಮೊತ್ತದಷ್ಟು ನಷ್ಟವನ್ನು ಭರಿಸಿತು. ಮತ್ತೊಂದು ಕಡೆ, ಕಂಪನಿಯು ಈ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಸಾಧ್ಯವಾಗಲಿಲ್ಲ.

---

[147] ಉದ್ಯೋಗದಾತರು ಗುತ್ತಿಗೆದಾರರಿಗೆ ರಾಷ್ಟ್ರೀಕೃತ/ಷೆಡ್ಯೂಲ್ ಬ್ಯಾಂಕ್ ನೀಡಿರುವಂತಹ ಉದ್ಯೋಗದಾತರು ಒಪ್ಪಿಕೊಳ್ಳಬಹುದಾದ ರೀತಿಯಲ್ಲಿ ಒಂದು ಷರತ್ತು ರಹಿತ ಬ್ಯಾಂಕ್ ಖಾತರಿಯ ಪ್ರತಿಯಾಗಿ ಮುಂಗಡ ಹಣವನ್ನು ನೀಡತಕ್ಕದ್ದು ಎಂಬುದಾಗಿ ಕೆಡಬ್ಲ್ಯು 4 ರ ಷರತ್ತು 42 ನಿರ್ದಿಷ್ಟ ಪಡಿಸಿದೆ. ಬ್ಯಾಂಕು ಖಾತರಿಯು ಮುಂಗಡ ಹಣಕಾಸನ್ನು ಪಾವತಿಸುವವರೆಗೂ ಜಾರಿಯಲ್ಲಿರತಕ್ಕದ್ದು.

[148] ಸೌಂದರ್ಯ ಕಿತ್ತಳೆ ಸೋಪು 75 ಗ್ರಾಮುಗಳು, ಸೌಂದರ್ಯ ಪಾರದರ್ಶಕ ಸೋಪು (ನಿಂಬೆ), ಸೌಂದರ್ಯ ಬೇಬಿ ಸೋಪು (ಬೆರ್ಬೆರ್ರೀಸ್ ಹಾಗೂ ಕ್ಯಾಲೆಂಡುಲಾ), ಸೌಂದರ್ಯ ಹ್ಯಾಂಡ್ ವಾಷ್ (ಬ್ಯಾಕ್ಟೀರಿಯಾ ವಿರೋಧಿ).

v. ಸರಬರಾಜಿಗಾಗಿ ಕೋರಿಕೆಯ ದಿನಾಂಕದಿಂದ 30 ದಿನಗಳು ಕಳೆದ ತಕ್ಷಣ ಕಂಪನಿಯು ಸರಬರಾಜಿಗಾಗಿ ಕೋರಲಾಗಿದ್ದ ಉತ್ಪನ್ನಗಳ ಪೈಕಿ ₹ 24.70 ಲಕ್ಷ[149] ಮೊತ್ತದಷ್ಟು ಉಳಿಕೆ ಉತ್ಪನ್ನಗಳನ್ನು (ಸರಬರಾಜಿಗಾಗಿ ಕೋರಲಾಗಿದ್ದ ₹ 60.32 ಲಕ್ಷ ಮೊತ್ತದಷ್ಟು ಉತ್ಪನ್ನಗಳ ಪೈಕಿ) ಸರಬರಾಜು ಮಾಡದಿದ್ದ ಕಾರಣಕ್ಕಾಗಿ ದಂಡವನ್ನು ವಿಧಿಸುವ ಸಲುವಾಗಿ ಒಡಂಬಡಿಕೆಯ ಅನುವುಗಳಿಗೆ[150] ಮೊರೆ ಹೋಗಲಿಲ್ಲ. ಸರಬರಾಜಿಗಾಗಿ ಕೋರಲಾಗಿದ್ದ ಉತ್ಪನ್ನಗಳನ್ನು ಸರಬರಾಜು ಮಾಡದಿದ್ದುದಕ್ಕಾಗಿ ಎರಡು ವರ್ಷಗಳು ಕಳೆದನಂತರ ಜುಲೈ 2020ರಲ್ಲಿ ನೀಡಲಾದಂತಹ ಒಂದು ಕಾನೂನು ನೋಟೀಸಿಗೆ ಉತ್ತರವಾಗಿ, ಸರಬರಾಜುದಾರರು ನೋಟೀಸಿನಲ್ಲಿ ತಿಳಿಸಲಾಗಿದ್ದಂತಹ ಅಪಾದನೆಗಳನ್ನು ಅಲ್ಲಗಳೆದರು (ಆಗಸ್ಟ್ 2020/ಸೆಪ್ಟಂಬರ್ 2020) ಹಾಗೂ ಸರಬರಾಜುಗಳನ್ನು ಷರತ್ತುಗಳ ಅನುಸಾರವೇ ಮಾಡಲಾಗಿತ್ತು ಎಂಬುದಾಗಿ ತಿಳಿಸಿ ತಾವು ಖಾತರಿಗಾಗಿ ನೀಡಿರುವಂತಹ ಭವಿಷ್ಯದಲ್ಲಿನ ದಿನಾಂಕಗಳ ಚೆಕ್ಕುಗಳ ಪ್ರತಿಯಾಗಿ ಪಾವತಿಗಳನ್ನು ಮಾಡದಂತೆ ತಮ್ಮ ಬ್ಯಾಂಕಿಗೆ ನಿರ್ದೇಶನಗಳನ್ನು ನೀಡಿದರು. ಆದಾಗ್ಯೂ, ಕಂಪನಿಯು ಸರಬರಾಜುದಾರರ ನಿಲುವನ್ನು ಪ್ರತಿವಾದಿಸುವ ಸಲುವಾಗಿ ಮುಂದಿನ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ. ಸುಸ್ಪಷ್ಟವಾಗಿ, ಕಂಪನಿಯು ಬ್ಯಾಂಕು ಖಾತರಿಯ ಅನುಪಸ್ಥಿತಿಯಲ್ಲಿ ತನ್ನ ಹಣಕಾಸಿನ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಳ್ಳಲಾಗಲಿಲ್ಲ.

ಸರ್ಕಾರವು ಈ ಕೆಳಗಿನಂತೆ ಉತ್ತರಿಸಿತು (ಆಗಸ್ಟ್ 2021)

- ಕಂಪನಿಯು ತನ್ನ ಶಾಖೆಗಳು ಇರುವಂತಹ ಕರ್ನಾಟಕ, ದೆಹಲಿ ಹಾಗೂ ಮುಂಬೈನಲ್ಲಿ ಒಂದು ಸವಿವರ ಮಾರುಕಟ್ಟೆ ಸಮೀಕ್ಷೆಯನ್ನು ನಡೆಸಿತು ಹಾಗೂ ಅದರ ಫಲಿತಾಂಶವು ಅತ್ಯುತ್ತಮವಾಗಿತ್ತು.

- ಸರಬರಾಜುದಾರರು ಉತ್ಪನ್ನಗಳ ಉತ್ಪಾದನೆಯಲ್ಲಿ ಬೃಹತ್ ಮೊತ್ತವನ್ನು ಹೂಡಿಕೆ ಮಾಡಿದ್ದರಾದ್ದರಿಂದ ಭವಿಷ್ಯದಲ್ಲಿನ ದಿನಾಂಕಗಳ ಚೆಕ್ಕುಗಳ ಪ್ರತಿಯಾಗಿ ಮುಂಗಡ ಪಾವತಿಯನ್ನು ಸರಬರಾಜುದಾರರ ವಿಶೇಷ ಕೋರಿಕೆಯ ಅನುಸಾರ ಬಿಡುಗಡೆಗೊಳಿಸಲಾಯಿತು. ಮುಂದುವರೆದು, ಅದು ಪರೀಕ್ಷಾರ್ಥ ಮಾರುಕಟ್ಟೆ ಆಧಾರದ ಮೇರೆಗೆ ಆಗಿತ್ತಾದ್ದರಿಂದ ಬ್ಯಾಂಕು ಖಾತರಿಯನ್ನು ಪಡೆದುಕೊಳ್ಳಲಿಲ್ಲ.

- ಸೋಪು ಉತ್ಪನ್ನಗಳ ತಯಾರಿಕೆ ಮತ್ತು ಅದನ್ನು ಮಾರುಕಟ್ಟೆಗೆ ಬಿಡುವಲ್ಲಿ ಕರ್ನಾಟಕ ಸೋಪುಗಳು ಮತ್ತು ಡಿಟರ್ಜೆಂಟ್ಸ್ ನಿಯಮಿತವು (ಕೆಎಸ್ ಅಂಡ್ ಡಿಎಲ್) ಈಗಾಗಲೇ ತೊಡಗಿರುವುದರಿಂದ, ಸಚಿವರು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಇವರ ನಿರ್ದೇಶನದ ಆಧಾರದ ಮೇರೆಗೆ ಕಂಪನಿಯಿಂದ ಸೌಂದರ್ಯ ಸೋಪನ್ನು ಮಾರುಕಟ್ಟೆಗೆ ಪರಿಚಯಿಸುವ ಯೋಜನೆಯನ್ನು ತಡೆಹಿಡಿಯಲಾಯಿತು

ಉತ್ತರವು ಒಪ್ಪುವಂತಿಲ್ಲ. ತನ್ನ ಉದ್ಯೋಗಿಗಳು ಹಾಗೂ ಗ್ರಾಹಕರ ನಡುವೆ ನಡೆಸಲಾಗಿದ್ದಂತಹ ಒಂದು ಮಾದರಿ ಆಯ್ಕೆ ಸಮೀಕ್ಷೆಯನ್ನು ಹೊರತುಪಡಿಸಿ ಯಾವುದೇ ಸವಿವರ ಸಮೀಕ್ಷೆಯನ್ನು ನಡೆಸಿದ್ದನ್ನು ಸಮರ್ಥಿಸಿಕೊಳ್ಳಲು ದಾಖಲೆಗಳು ಲಭ್ಯವಿರಲಿಲ್ಲ. ಉತ್ಪನ್ನಕ್ಕೆ ಪ್ರತಿಕ್ರಿಯೆಯು ಉತ್ತಮವಾಗಿತ್ತು ಎಂಬುದರ ಬೆಂಬಲವಾಗಿ ದಾಖಲೆಗಳಲ್ಲಿ ಯಾವುದೇ ಅಂಶಗಳೂ ಇರಲಿಲ್ಲ.

---

[149] ಸರಬರಾಜುದಾರರಿಗೆ ಪಾವತಿಸಲಾದ ಮುಂಗಡ (₹ 50 ಲಕ್ಷ) ಇದರಿಂದ ₹ 14.23 ಲಕ್ಷ ಮೊತ್ತದಷ್ಟು ಸರಬರಾಜು ಮಾಡಲು ಕೋರಿರದ ಉತ್ಪನ್ನಗಳಿಗೆ ಸಂಬಂಧಿಸಿದ್ದನ್ನು ಹೊಂದಾಣಿಕೆ ಮಾಡಿದನಂತರ ಸರಬರಾಜು ಮಾಡಲಾಗಿರುವ ಉತ್ಪನ್ನಗಳ ಮೌಲ್ಯ ಕಳೆಯುವುದು (₹ 25.30 ಲಕ್ಷ).

[150] ಸರಬರಾಜಿಗಾಗಿ ಕೋರಿಕೆ ಪತ್ರವನ್ನು ಕಳುಹಿಸಿದ ದಿನಾಂಕದಿಂದ 30 ದಿನಗಳು ಕಳೆದನಂತರ ಸರಬರಾಜಿನಲ್ಲಿನ ಕೊರತೆಯ ಮೌಲ್ಯದ ಮೇಲೆ ಪ್ರಸಕ್ತ ಇರುವಂತಹ ಬ್ಯಾಂಕು ಬಡ್ಡಿ ದರದಲ್ಲಿ ದಂಡವನ್ನು ವಿಧಿಸಲು ಒಡಂಬಡಿಕೆಯ ಷರತ್ತು 15(ಸಿ) ನಿರ್ದಿಷ್ಟಪಡಿಸಿದೆ.

ಮುಂಗಡ ಪಾವತಿಯು ಒಡಂಬಡಿಕೆಯ ಷರತ್ತುಗಳ ಉಲ್ಲಂಘನೆಯಾಗಿತ್ತು. ಅಲ್ಲದೆಯೇ, ಪರೀಕ್ಷಾರ್ಥ ಮಾರುಕಟ್ಟೆ ಉದ್ದೇಶಕ್ಕಾಗಿ ಭವಿಷ್ಯದಲ್ಲಿನ ದಿನಾಂಕಗಳ ಚೆಕ್ಕುಗಳಿಗೆ ಪ್ರತಿಯಾಗಿ ಮುಂಗಡ ಹಣದ ಬಿಡುಗಡೆಗಾಗಿ ಯಾವುದೇ ನಿರ್ದಿಷ್ಟ ವಿನಾಯಿತಿ ಇರಲಿಲ್ಲ. ಕಂಪನಿಯು, ಮುಂಗಡ ಹಣಕಾಸನ್ನು ಬಿಡುಗಡೆಗೊಳಿಸುವ ಮೊದಲು ಬ್ಯಾಂಕು ಖಾತರಿಯನ್ನು ಪಡೆದುಕೊಳ್ಳದಿರುವ ಮೂಲಕ ತನ್ನ ಹಣಕಾಸಿನ ಸ್ಥಿತಿಗತಿಗಳ ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲಗೊಂಡಿತ್ತು. ಸೋಪು ಉತ್ಪನ್ನಗಳ ತಯಾರಿಕೆ ಹಾಗೂ ಅವುಗಳನ್ನು ಮಾರುಕಟ್ಟೆಗೆ ಬಿಡುವ ಸಲುವಾಗಿ ಕರ್ನಾಟಕ ಸೋಪುಗಳು ಮತ್ತು ಡಿಟರ್ಜೆಂಟ್‌ಗಳ ನಿಯಮಿತವು ಅಸ್ತಿತ್ವದಲ್ಲಿರುವಂತಹ ಸರ್ಕಾರಿ ಉದ್ದಿಮೆಯಾಗಿದೆ ಎಂಬುದು ಅರಿತಿರುವ ವಾಸ್ತವಾಂಶವಾಗಿರುತ್ತದೆ. ಆದ್ದರಿಂದ, ಈ ವಾಸ್ತವಾಂಶವನ್ನು ಪರಿಗಣಿಸದೆಯೇ, 'ಸೌಂದರ್ಯ' ಎಂಬ ನಿರ್ದಿಷ್ಟ ವ್ಯಾಪಾರ ಮುದ್ರಿಕೆ ಹೆಸರಿನಲ್ಲಿ ಸೋಪನ್ನು ಬಿಡುಗಡೆ ಮಾಡಿದ್ದು ಸಮರ್ಥನೀಯವಾಗಿರಲಿಲ್ಲ.

ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುವ ಮೊದಲು, ಉತ್ಪನ್ನದ ಬೇಡಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಕಂಪನಿಯು ವಿಫಲವಾಗಿತ್ತು, ಕಾರ್ಯನಿರ್ವಹಣಾ ಖಾತರಿಯನ್ನು ಪಡೆದುಕೊಳ್ಳದೆಯೇ, ಕ್ರಮ ಬದ್ಧವಾದ ಭದ್ರತೆಯಿಲ್ಲದೆಯೇ ಸರಬರಾಜುದಾರರಿಗೆ ಮುಂಗಡ ಹಣಕಾಸನ್ನು ಬಿಡುಗಡೆಗೊಳಿಸುವ ಮೂಲಕ ಹಾಗೂ ಸರಬರಾಜುಗಳಲ್ಲಿ ತಪ್ಪಿತಸ್ಥಗೊಂಡಿದ್ದ ಸರಬರಾಜುದಾರರಿಗೆ ದಂಡವನ್ನು ವಿಧಿಸದಿರುವ ಮೂಲಕ ವಿವಿಧ ಶಾಸನಬದ್ಧ ಅನುವುಗಳ ಹಾಗೂ ಒಡಂಬಡಿಕೆಯ ಷರತ್ತುಗಳ ಉಲ್ಲಂಘನೆ ಮಾಡಿತ್ತು. ಈ ಲೋಪದೋಷಗಳು ₹ 68.88 ಲಕ್ಷ[151] ಮೊತ್ತದಷ್ಟು ವೆಚ್ಚಗಳನ್ನು ನಿಷ್ಫಲಗೊಳಿಸಿದವು.

**ಉತ್ಪನ್ನಗಳ ಹೊಸ ಸಾಲುಗಳಲ್ಲಿ ಹಣಕಾಸನ್ನು ತೊಡಗಿಸುವ ಸಾಹಸವನ್ನು ಮಾಡುವ ಮೊದಲು ಕಂಪನಿಯು ಸಮರ್ಪಕವಾದಂತಹ ರೀತಿಯಲ್ಲಿ ಸಮೀಕ್ಷೆಯನ್ನು ನಡೆಸಬೇಕು ಹಾಗೂ ಕಂಪನಿಯ ಹಣಕಾಸು ಸ್ಥಿತಿಗತಿಗಳ ಸಂರಕ್ಷಣೆಯ ಸಲುವಾಗಿ ಗುತ್ತಿಗೆದಾರರುಗಳಿಗೆ ಮುಂಗಡ ಪಾವತಿಗಳನ್ನು ಮಾಡುವುದಕ್ಕೆ ಸಂಬಂಧಿಸಿದಂತೆ ಶಾಸನಬದ್ಧ ಅಗತ್ಯತೆಗಳು ಮತ್ತು ಒಡಂಬಡಿಕೆಗಳ ಷರತ್ತುಗಳು/ಅನುವುಗಳನ್ನು ಅನುಸರಿಸುವುದನ್ನು ಕಂಪನಿಯು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ.**

[151] ಸರಬರಾಜುದಾರಿಗೆ ಪಾವತಿಸಲಾದ ಒಟ್ಟಾರೆ ಮುಂಗಡ ಹಣಕಾಸು (₹ 50 ಲಕ್ಷ) ಇದರಿಂದ ಸರಬರಾಜಿಗಾಗಿ ಕೋರಿಕೆಯನ್ನು ಸಲ್ಲಿಸದ ಉತ್ಪನ್ನಗಳೂ ಸೇರಿದಂತೆ ಸರಬರಾಜುಗಳ ಮೌಲ್ಯ (₹ 39.53 ಲಕ್ಷ) ಉಪಯೋಗಿಸಬಹುದಾದ ಅವಧಿಯು ಮುಕ್ತಾಯಗೊಂಡಿರುವ ದಾಸ್ತಾನು (₹ 27.67 ಲಕ್ಷ) ಇದಕ್ಕೆ ಉತ್ಪನ್ನದ ಸೂತ್ರವನ್ನು ಅಭಿವೃದ್ಧಿಪಡಿಸುವುದು, ಜಾಹೀರಾತು ಹಾಗೂ ಅಚ್ಚು, ಬಣ್ಣಗಳು ಹಾಗೂ ವಿನ್ಯಾಸ/ಪ್ಲೇಟುಗಳ ಮೇಲಿನ ವೆಚ್ಚವನ್ನು ಕೂಡುವುದು (₹ 30.74 ಲಕ್ಷ).

**ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್**

## *2.5. ಹೆಚ್ಚುವರಿ ವೆಚ್ಚ*

**ಪ್ಲೀಟ್ ವ್ರಾಪಿಂಗ್ ಯಂತ್ರವನ್ನು ತಗ್ಗಿಸಲ್ಪಟ್ಟಂತಹ ಕಾರ್ಯಾಚರಣೆಯ ವೇಗದ ಕಾರಣಗಳ ಮೇರೆಗೆ ಓರ್ವ ಏಕೈಕ ತಯಾರಕರು/ಸರಬರಾಜುದಾರರಿಂದ ಖರೀದಿಸುವ ಸಲುವಾಗಿ ಕಂಪನಿಯು ತೆಗೆದುಕೊಂಡ ತೀರ್ಮಾನವು ₹ 1.08 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದಂತಹ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು.**

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ (ಕಂಪನಿ) ಮೈಸೂರು ಗಂಧದ ಸಾಬೂನುಗಳೂ ಸೇರಿದಂತೆ ವೈಯಕ್ತಿಕ ನೈರ್ಮಲ್ಯ ಸಂರಕ್ಷಣಾ ಉತ್ಪನ್ನಗಳನ್ನು [152] (ಪರ್ಸನಲ್ ಕೇರ್ ಪ್ರಾಡಕ್ಟ್ಸ್) ತಯಾರಿಸುವ ಕಂಪನಿಯಾಗಿತ್ತು. ಕಂಪನಿಯು ಈವರೆವಿಗೂ ಸ್ನಾನದ ಸಾಬೂನುಗಳಿಗೆ ಅಲಂಕಾರಿಕ ಕಾಗದ/ರಟ್ಟಿನ ಹೊದಿಕೆ ಹಾಕುವ ಪ್ರಕ್ರಿಯೆಯನ್ನು (ವ್ರಾಪಿಂಗ್) ಕೈಯಿಂದ ಕಾರ್ಯಾಚರಣೆ ನಡೆಸಲಾಗುವ ಅಲಂಕಾರಿಕ ಕಾಗದ/ರಟ್ಟಿನ ಹೊದಿಕೆ ಹಾಕುವ ಯಂತ್ರದ ಮೂಲಕ ಕೈಗೊಳ್ಳುತ್ತಿತ್ತು. ಉತ್ಪನ್ನಕ್ಕೆ ಬೇಡಿಕೆಯು ಹೆಚ್ಚಾಯಿತಾದ್ದರಿಂದ ಹಾಗೂ ಅಲ್ಲದೆಯೇ ಸಿಬ್ಬಂದಿ ಸಂಖ್ಯೆಯನ್ನು ತಗ್ಗಿಸುವ ಉದ್ದೇಶದಿಂದ, ಕಂಪನಿಯು ಸ್ವಯಂಚಾಲಿತ ಪ್ಲೀಟ್ ವ್ರಾಪಿಂಗ್ ಯಂತ್ರವನ್ನು ಖರೀದಿಸುವ ಮೂಲಕ ಪ್ಲೀಟ್‌ವ್ರ್ಯಾಪಿಂಗ್ ಅನ್ನು ಯಾಂತ್ರೀಕರಿಸುವ ತೀರ್ಮಾನಕ್ಕೆ ಬಂದಿತು. ಕಂಪನಿಯ ನಿರ್ದೇಶಕರುಗಳ ಮಂಡಳಿಯು ಸ್ವಯಂಚಾಲಿತ ಪ್ಲೀಟ್‌ವ್ರ್ಯಾಪಿಂಗ್ ಯಂತ್ರದ ಖರೀದಿಗಾಗಿ ತನ್ನ ಅನುಮೋದನೆ ನೀಡಿತು (ಸೆಪ್ಟಂಬರ್ 2016). ನಿರ್ದೇಶಕರುಗಳ ಮಂಡಳಿಯು ಈ ಪ್ರಸ್ತಾವನೆಗೆ ಅನುಮೋದನೆ ನೀಡುವ ವೇಳೆಯಲ್ಲಿ ಕಂಪನಿಯು ಪ್ಲೀಟ್‌ವ್ರ್ಯಾಪಿಂಗ್ ಯಂತ್ರಗಳ ವ್ಯಾಪಾರದಲ್ಲಿ ತೊಡಗಿರುವಂತಹ ಮಾರಾಟಗಾರರುಗಳ ಜೊತೆಯಲ್ಲಿ ವಿಚಾರಣೆಗಳನ್ನು ಮಾಡಲಾಗಿರುವುದು ಹಾಗೂ ಮೆ. ಬಾಕುಬಾಯಿ ಅಂಬಾಲಾಲ್, ಮುಂಬೈ (ಮೆ. ಓರಿಯಂಟಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್, ಇವರ ಒಂದು ವಿಭಾಗ), ಇವರು ಮೆ. ಸಾಸ್ಮರಿಯಾನಿ ಟೊಮ್ಮಾಸ್ಸೋ, ಇಟಲಿ (ಈ ಮೊದಲು ಮೆ. ಗ್ಯೂರೆಶ್ಚಿ, ಇಟಲಿ, ಇವರ ಮಾಲಿಕತ್ವದಲ್ಲಿದ್ದುದು), ಇವರು ತಯಾರಿಸುವ ಪ್ಲೀಟ್‌ವ್ರ್ಯಾಪಿಂಗ್ ಯಂತ್ರವನ್ನು ಭಾರತದಲ್ಲಿ ಮಾರಾಟದಲ್ಲಿ ತೊಡಗಿರುವಂತಹ ಏಕೈಕ ವರ್ತಕರಾಗಿರುತ್ತಾರೆ ಎಂಬುದನ್ನು ಗಮನಿಸಿತು.

ಕಾರ್ಯಾಚರಣೆಯ ವೇಗವು (ನಿಮಿಷ ಒಂದಕ್ಕೆ 150 ಪ್ಲೀಟ್‌ವ್ರ್ಯಾಪ್‌ಗಳು) ಸೇರಿದಂತೆ ಯಂತ್ರದ ತಾಂತ್ರಿಕ ನಿರ್ದಿಷ್ಟನಿರೂಪಣೆಗಳನ್ನು ಇಟಲಿಯ ಮೆ. ಸಾಸ್ಮರಿಯಾನಿ ಟೊಮ್ಮಾಸ್ಸೋ, ಇವರು ತಯಾರಿಸಿರುವ ಯಂತ್ರದ ನಿರ್ದಿಷ್ಟ ವ್ಯಾಪಾರ ಮುದ್ರಿಕೆಯನ್ನು (ಬ್ರಾಂಡ್) ದೃಷ್ಟಿಯಲ್ಲಿಟ್ಟುಕೊಂಡು ಅಂತಿಮರೂಪಕ್ಕೆ ತರಲಾಯಿತು. ಕಂಪನಿಯು ನಿಮಿಷ ಒಂದಕ್ಕೆ 150 ಪ್ಲೀಟ್‌ವ್ರ್ಯಾಪ್‌ಗಳ ಕಾರ್ಯಾಚರಣೆ ವೇಗದೊಂದಿಗೆ ಪ್ಲೀಟ್‌ವ್ರ್ಯಾಪಿಂಗ್ ಯಂತ್ರದ ಸರಬರಾಜಿಗಾಗಿ (ನವಂಬರ್ 2016 ಹಾಗೂ ಮಾರ್ಚ್ 2017ರ ನಡುವೆ ಐದು ಸಲ) ಟೆಂಡರುಗಳನ್ನು ಆಹ್ವಾನಿಸಿತು. ಐದು ಟೆಂಡರುಗಳನ್ನು (ನಾಲ್ಕನೆಯ ಕರೆಯನ್ನು ಹೊರತುಪಡಿಸಿದಂತೆ) ಅವುಗಳು ಏಕೈಕ ಸವಾಲುಗಳಾಗಿದ್ದವಾದ್ದರಿಂದ, ಅಂದರೆ ಮೆ. ಓರಿಯಂಟಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್ (ಮೆ॥ ಒಇಪಿಎಲ್) ಪರಿಗಣಿಸಿರಲಿಲ್ಲ. ಮೆ. ಒಇಪಿಎಲ್, ಇವರು ಮಾತ್ರ ಮೆ. ಸಾಸ್ಮರಿಯಾನಿ ಟೊಮ್ಮಸ್ಸೊ, ಇಟಲಿ, ಇವರು ತಯಾರಿಸುವ ಪ್ಲೀಟ್‌ವ್ರ್ಯಾಪಿಂಗ್ ಯಂತ್ರದ ಸರಬರಾಜಿಗೆ ವರ್ತಕರಾಗಿರುವರು ಎಂಬುದನ್ನು ಗಮನಿಸಿದ್ದಾಗ್ಯೂ, ಹಿಂದಿನ ನಾಲ್ಕು ಟೆಂಡರುಗಳಲ್ಲಿ ಮೆ ಒಇಪಿಎಲ್, ಇವರ ಸವಾಲನ್ನು ಪರಿಗಣಿಸದಿರಲು ಕಾರಣಗಳು ದಾಖಲೆಗಳಲ್ಲಿ ಇರಲಿಲ್ಲ,

ಮೇ 2017ರಲ್ಲಿ ಕರೆಯಲಾದಂತಹ ಆರನೆಯ ಟೆಂಡರು ಕರೆಯಲ್ಲಿ ಮೆ. ಒಇಪಿಎಲ್, ಇವರು ಏಕೈಕ ಸವಾಲುದಾರರಾಗಿದ್ದರು (ನೀಡಿಕೆ ಪತ್ರ ದಿನಾಂಕ 29 ಮೇ 2017). ಈ ಬಾರಿ, ಕಂಪನಿಯು ದರ ಸಂಧಾನ ನಡೆಸಿತು ಹಾಗೂ ಮೆ. ಒಇಪಿಎಲ್ ಇವರಿಗೆ ₹ 2.90 ಕೋಟಿಗೆ ಖರೀದಿ ಆದೇಶ ನೀಡಿತು (11 ಸೆಪ್ಟೆಂಬರ್ 2017). ಕಂಪನಿಯು ₹ 87.08 ಲಕ್ಷ (ಮೌಲ್ಯದ ಶೇಕಡಾ 30ರಷ್ಟು) ಮೊತ್ತದಷ್ಟು ಮುಂಗಡ ಹಣಕಾಸನ್ನು 19 ಅಕ್ಟೋಬರ್ 2017ರಂದು ಬಿಡುಗಡೆಗೊಳಿಸಿತು. ತದನಂತರದಲ್ಲಿ,

[152] ಮಾರ್ಜಕಗಳು, ಸುಗಂಧ ಪರಿಮಳಗಳು, ಟಾಲ್ಕಮ್ ಪೌಡರು, ಕೈ ತೊಳೆಯುವ ದ್ರವ ಸಾಧನಗಳು, ಮುಖ ತೊಳೆಯುವ ದ್ರವ ಸಾಧನಗಳು, ಕೊಬ್ಬರಿ ಎಣ್ಣೆ, ಇತ್ಯಾದಿ.

ಕಂಪನಿಯು ಸರಬರಾಜು ಮಾಡಿದ್ದಂತಹ ಸೋಪುಗಳ ಮಾದರಿಗಳಿಗೆ ಸರಬರಾಜು ಮಾಡಲು ಪ್ರಸ್ತಾಪಿಸಲಾಗಿರುವಂತಹ ಯಂತ್ರವು (ಮಾಡೆಲ್– ಪಿಎಲ್–150) ನಿಮಿಷ ಒಂದಕ್ಕೆ 120 ಫ್ಲೀಟ್‌ವ್ರ್ಯಾಪ್‌ಗಳ (ನಿರ್ದಿಷ್ಟಪಡಿಸಲಾಗಿದ್ದಂತಹ ನಿಮಿಷ ಒಂದಕ್ಕೆ 150 ಫ್ಲೀಟ್‌ವ್ರ್ಯಾಪ್ ಪ್ರತಿಯಾಗಿ) ವೇಗವನ್ನು ಸಾಧಿಸಬಲ್ಲದು ಎಂಬುದಾಗಿ ಮೆ. ಒಇಪಿಎಲ್ ಕಂಪನಿಗೆ ತಿಳಿಸಿತು (ಡಿಸೆಂಬರ್ 2017/ಫೆಬ್ರವರಿ 2018). ಯಂತ್ರವು ಬ್ರ್ಯಾಂಡೆಡ್ ಸೋಪುಗಳಿಗೆ ನಿಮಿಷ ಒಂದಕ್ಕೆ 150 ಫ್ಲೀಟ್‌ವ್ರ್ಯಾಪ್‌ಗಳ ನಿರ್ದಿಷ್ಟಪಡಿಸಲಾಗಿರುವಂತಹ ಕಾರ್ಯಾಚರಣೆಯ ವೇಗವನ್ನು ಸಾಧಿಸಬಲ್ಲದು ಎಂಬುದಾಗಿಯೂ ಸಂಸ್ಥೆಯು ತಿಳಿಸಿತು. ಆದ್ದರಿಂದ, ಯಂತ್ರದ ನಿರ್ದಿಷ್ಟನಿರೂಪಣೆಯನ್ನು ನಿಮಿಷ ಒಂದಕ್ಕೆ 120 ಫ್ಲೀಟ್‌ವ್ರ್ಯಾಪ್ ಎಂಬುದಾಗಿ ಬದಲಾಯಿಸಿ 11 ಸೆಪ್ಟಂಬರ್ 2017 ದಿನಾಂಕದ ಖರೀದಿ ಆದೇಶವನ್ನು ತಿದ್ದುಪಡಿ ಮಾಡುವಂತೆ ಮೆ. ಒಇಪಿಎಲ್ ಕಂಪನಿಯ ದರ ಸಂಧಾನ ಸಮಿತಿಯನ್ನು (ಪಿಎನ್‌ಸಿ) ಕೋರಿತು. ಅಗತ್ಯವಿದ್ದಂತಹ ಕಾರ್ಯಾಚರಣೆಯ ವೇಗವನ್ನು ಸಾಧಿಸಲಾಗಲಿಲ್ಲವಾದ್ದರಿಂದ, ಉಪ ಮಹಾವ್ಯವಸ್ಥಾಪಕರು (ಪಿ ಅಂಡ್ ಎಂ) ಇವರ ನೇತೃತ್ವದಲ್ಲಿದ್ದಂತಹ ಕಂಪನಿಯ ದರ ಸಂಧಾನ ಸಮಿತಿಯು 3 ಮಾರ್ಚ್ 2018ರಂದು ಚರ್ಚಿಸಿ ಖರೀದಿ ಆದೇಶದ ತಿದ್ದುಪಡಿಗಾಗಿ ಸರಬರಾಜುದಾರರು ಮಾಡಿರುವ ಕೋರಿಕೆಯನ್ನು (ಫೆಬ್ರವರಿ 2018) ಒಪ್ಪಲಿಲ್ಲ, ಆದರೆ ಖರೀದಿ ಆದೇಶವನ್ನು ರದ್ದುಗೊಳಿಸುವ ಹಾಗೂ ಟೆಂಡರನ್ನು ಹೊಸದಾಗಿ ಆಹ್ವಾನಿಸುವ ತೀರ್ಮಾನವನ್ನು ತೆಗೆದುಕೊಂಡಿತು.

ಟೆಂಡರಿನಲ್ಲಿನ ನಿರ್ದಿಷ್ಟನಿರೂಪಣೆಗಳು ಸೋಪಿನ ಮಾದರಿಯನ್ನು (ಬ್ರ್ಯಾಂಡೆಡ್ ಅಥವಾ ಬ್ರ್ಯಾಂಡ್‌ಲೆಸ್) ತಿಳಿಸಿರಲಿಲ್ಲ, ಅದು ಕೇವಲ ಉತ್ಪನ್ನದ ಗಾತ್ರವನ್ನು ವ್ಯಾಸ ಹಾಗೂ ದಪ್ಪ ಎಷ್ಟಿದೆ ಎಂಬುದನ್ನು ಮಾತ್ರ ತಿಳಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಮೇ 2020). ಆರನೇ ಟೆಂಡರಿಗೆ ಪ್ರತಿಯಾಗಿ ಮೆ. ಒಇಪಿಎಲ್‌ನ 29 ಮೇ 2017 ದಿನಾಂಕದ ನೀಡಿಕೆ ಪತ್ರವು ಮಾಡೆಲ್ ಪಿಎಲ್ – 150 ಫ್ಲೀಟ್‌ವ್ರ್ಯಾಪ್ ಯಂತ್ರವು 150 ದುಂಡಗಿನ ಹಾಗೂ ಅಂಡಾಕೃತಿಯ “ಬ್ರ್ಯಾಂಡೆಡ್” ಸೋಪುಗಳಿಗೆ ವ್ರ್ಯಾಪ್ ಮಾಡಲು ವಿನ್ಯಾಸಗೊಳಿಸಲಾಗಿರುವುದು ಎಂಬುದಾಗಿ ನಮೂದಿಸಲಾಗಿತ್ತು. ಸವಾಲನ್ನು ಒಪ್ಪಿಕೊಳ್ಳುವ ಮೊದಲು ನೀಡಿಕೆ ಪತ್ರದಲ್ಲಿ ತಿಳಿಸಲಾಗಿದ್ದಂತಹ ಸೋಪಿನ ಮಾದರಿಗೆ ಸಂಬಂಧಿಸಿದಂತೆ ತಾಂತ್ರಿಕ ಪರಿಮಿತಿಗಳನ್ನು ಪರಿಗಣಿಸಲಾಗಿತ್ತೆ ಎಂಬುದು ಲೆಕ್ಕಪರಿಶೋಧನೆಗೆ ಒದಗಿಸಲಾದಂತಹ ದಾಖಲೆಗಳಿಂದ ಸ್ಪಷ್ಟವಾಗಿರಲಿಲ್ಲ.

ಅಲ್ಲದೆಯೇ, ನಿರ್ದೇಶಕರುಗಳ ಮಂಡಳಿಯು ಗಮನಿಸಿದ್ದಂತಹ ವಾಸ್ತವಾಂಶದಂತೆ ಹಾಗೂ ಅಲ್ಲದೆಯೇ ಹಿಂದಿನ ನಾಲ್ಕು ಟೆಂಡರುಗಳಲ್ಲಿ ಸ್ವೀಕರಿಸಲಾದಂತಹ ಏಕೈಕ ಸವಾಲುಗಳಿಂದ ಸುಸ್ಪಷ್ಟಗೊಳ್ಳುವಂತೆ ಸರಬರಾಜಿನ ಬದಲಿ ಮೂಲವು ಇರದಿದ್ದ ಕಾರಣ ತಗ್ಗಿಸಲ್ಪಟ್ಟಂತಹ ಕಾರ್ಯಾಚರಣೆ ವೇಗದೊಂದಿಗೆ (ನಿಮಿಷ ಒಂದಕ್ಕೆ 120 ಫ್ಲೀಟ್‌ವ್ರ್ಯಾಪ್‌ಗಳು) ಯಂತ್ರವನ್ನು ಸರಬರಾಜು ಮಾಡಲು ಅನುಕೂಲ ಕಲ್ಪಿಸುವ ಸಲುವಾಗಿ ಖರೀದಿ ಆದೇಶವನ್ನು ತಿದ್ದುಪಡಿ ಮಾಡುವಂತೆ ಮೆ. ಒಇಪಿಎಲ್ ಮಾಡಿದ ಕೋರಿಕೆಯನ್ನು ತಿರಸ್ಕರಿಸಲು ದರ ಸಂಧಾನ ಸಮಿತಿಯು ತೆಗೆದುಕೊಂಡಂತಹ ತೀರ್ಮಾನವು ವಿವೇಚನೆಯಿಂದ ಕೂಡಿರಲಿಲ್ಲ. ಅಲ್ಲದೆಯೇ, ತದನಂತರದಲ್ಲಿ ಕಂಪನಿಯು ನಿಮಿಷ ಒಂದಕ್ಕೆ 120 ಫ್ಲೀಟ್‌ವ್ರ್ಯಾಪ್‌ಗಳ ವೇಗದೊಂದಿಗೆ ಅದೇ ಯಂತ್ರವನ್ನು ₹ 3.98 ಕೋಟಿ ಮೊತ್ತಕ್ಕೆ ಅಂದರೆ ಈ ಹಿಂದೆ ನೀಡಲಾಗಿದ್ದಂತಹ ಖರೀದಿ ಆದೇಶವನ್ನು ಮೀರಿದಂತೆ ₹ 1.08 ಕೋಟಿ ಅಧಿಕ ಮೊತ್ತಕ್ಕೆ ಖರೀದಿಸುವ ಸಲುವಾಗಿ ಮೆ. ಒಇಪಿಎಲ್, ಇವರಿಗೆ ಹೊಸದಾಗಿ ಖರೀದಿ ಆದೇಶವನ್ನು ನೀಡಿತು (ಫೆಬ್ರವರಿ 2019). ನಿಮಿಷ ಒಂದಕ್ಕೆ 120 ಫ್ಲೀಟ್‌ವ್ರ್ಯಾಪ್‌ಗಳ ತಗ್ಗಿಸಲ್ಪಟ್ಟಂತಹ ಕಾರ್ಯಾಚರಣೆ ವೇಗದೊಂದಿಗಿನ ಯಂತ್ರದ ಖರೀದಿಗೆ ಕಂಪನಿಗೆ ಯಾವುದೇ ಆಕ್ಷೇಪಣೆಯೂ ಇರಲಿಲ್ಲ ಎಂಬುದನ್ನು ಇದು ಸುಸ್ಪಷ್ಟವಾಗಿ ಸೂಚಿಸುತ್ತದೆ ಮತ್ತು ಆದ್ದರಿಂದ ಮೆ. ಒಇಪಿಎಲ್, ಇವರ ಈ ಹಿಂದಿನ (ಡಿಸೆಂಬರ್ 2017/ಫೆಬ್ರವರಿ 2018) ಕೊಡುಗೆಯನ್ನು ತಿರಸ್ಕರಿಸುವಲ್ಲಿ ಯಾವುದೇ ಸಮರ್ಥನೆಯೂ ಇರಲಿಲ್ಲ, ಇದರಿಂದಾಗಿ ಕಾಲಮಿತಿ ಮೀರಿದ ಕಾರಣ ₹ 1.08 ಕೋಟಿ ಮೊತ್ತದಷ್ಟು ಸಮರ್ಥನೀಯವಲ್ಲದ ಹೆಚ್ಚುವರಿ/ಅಧಿಕ ವೆಚ್ಚವನ್ನು ಭರಿಸುವಲ್ಲಿ ಪರಿಣಮಿಸಿತು.

ಕಾಮಗಾರಿ ಆದೇಶದ ಷರತ್ತಿನ ಅನುಸಾರ ಮೆ. ಒಇಪಿಎಲ್, ಇವರಿಗೆ ₹ 96.05 ಲಕ್ಷ ಮೊತ್ತದಷ್ಟು ಮುಂಗಡ ಪಾವತಿಯನ್ನೂ ಸಹ ಮಾಡಲಾಗಿತ್ತು (ನವಂಬರ್ 2019) ಹಾಗೂ ಉಳಿಕೆ ಮೊತ್ತವನ್ನು ಯಂತ್ರವನ್ನು ಕಾರ್ಯೋದ್ಯುಕ್ತಗೊಳಿಸಿದನಂತರ ಬಿಡುಗಡೆಗೊಳಿಸಬೇಕಿತ್ತು. ಮೆ. ಒಇಪಿಎಲ್, ಇವರು ಯಂತ್ರವನ್ನು ನಿಗದಿತ ದಿನಾಂಕ ನವಂಬರ್ 2019ಕ್ಕೆ ಪ್ರತಿಯಾಗಿ ಫೆಬ್ರವರಿ 2020ರಲ್ಲಿ ನೀಡಿದರು.

ವಿತರಣೆಯಲ್ಲಿನ ವಿಳಂಬಕ್ಕಾಗಿ ಗುತ್ತಿಗೆ ಮೌಲ್ಯದ ಶೇಕಡಾ ಐದರಷ್ಟು ಅಂದರೆ ₹ 19.90 ಲಕ್ಷ[153] ಮೊತ್ತದಷ್ಟು ದಂಡವನ್ನು ವಿಧಿಸಲಿಲ್ಲ. ಮುಂದುವರೆದು, ಯಂತ್ರವನ್ನು ಇನ್ನೂ ಉಪಯೋಗಿಸಿಕೊಳ್ಳುತ್ತಿರುವುದಿಲ್ಲ, ಕಂಪನಿಯು ಇನ್ನೂ ಯಂತ್ರವನ್ನು ಕಾರ್ಯೋದ್ಯುಕ್ತಗೊಳಿಸುವ ಪ್ರಕ್ರಿಯೆಯಲ್ಲಿತ್ತು (ಸೆಪ್ಟಂಬರ್ 2021).

ತಮ್ಮ ಪ್ರಧಾನ ಸರಬರಾಜುದಾರರಿಗೆ (ಮೂಲ ತಯಾರಕರು) ನಿಮಿಷ ಒಂದಕ್ಕೆ 120 ಫ್ಲೀಟ್‌ವ್ರ್ಯಾಪ್ ವೇಗದಿಂದ ನಿಮಿಷ ಒಂದಕ್ಕೆ 150 ಫ್ಲೀಟ್‌ವ್ರ್ಯಾಪ್ ವೇಗಕ್ಕೆ ಹೆಚ್ಚಳಗೊಳಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ಮೆ. ಒಇಪಿಎಲ್, ಇವರಿಂದ ಖಚಿತಪಡಿಸಿಕೊಂಡನಂತರ ದರ ಸಂಧಾನ ಸಮಿತಿಯು ಖರೀದಿ ಆದೇಶವನ್ನು (ಸೆಪ್ಟಂಬರ್ 2017) ರದ್ದುಗೊಳಿಸಲು ಹಾಗೂ ಟೆಂಡರನ್ನು ಹೊಸದಾಗಿ ಆಹ್ವಾನಿಸಲು ತೀರ್ಮಾನಿಸಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2021). ಸೋಪಿನ ಮಾದರಿಗೆ ಸಂಬಂಧಿಸಿದಂತೆ, ಫ್ಲೀಟ್ ವ್ರಾಪಿಂಗ್‌ನ ಅಗತ್ಯತೆಯಿರುವಂತಹ ಸೋಪುಗಳ ಮಾದರಿಗಳನ್ನು ಮೆ. ಒಇಪಿಎಲ್, ಇವರಿಗೆ ತಾಂತ್ರಿಕ ಪ್ರಸ್ತುತಿಯ ವೇಳೆಯಲ್ಲಿ ಲಭ್ಯಗೊಳಿಸಲಾಯಿತು ಎಂಬುದಾಗಿ ತಿಳಿಸಿತು (ಆಗಸ್ಟ್ 2021). ಏಪ್ರಿಲ್ 2021ರಲ್ಲಿ ನಡೆಸಲಾದಂತಹ ಪ್ರಾಯೋಗಿಕ ಕಾರ್ಯಾಚರಣೆಯಲ್ಲಿ ಯಂತ್ರವು ಅಗತ್ಯ ಉತ್ಪಾದನಾ ಸಾಮರ್ಥ್ಯವನ್ನು ಪೂರೈಸಲಿಲ್ಲ ಹಾಗೂ ಮೆ. ಒಇಪಿಎಲ್, ಇವರು ಅದನ್ನು ಸರಿಪಡಿಸುವ ಪ್ರಕ್ರಿಯೆಯಲ್ಲಿದ್ದರು ಎಂಬುದಾಗಿಯೂ ತಿಳಿಸಿತು (ಸೆಪ್ಟಂಬರ್ 2021).

ಉತ್ತರವು ಒಪ್ಪುವಂತಿಲ್ಲ. ವಿಶ್ವ ಮಾರುಕಟ್ಟೆಯಲ್ಲಿ ಸರಬರಾಜಿನ ಏಕೈಕ ಮೂಲವಿತ್ತು ಎಂಬುದನ್ನು ಕಂಪನಿಯು ಅರಿತಿತ್ತು. ಇದರ ಹೊರತಾಗಿಯೂ, ಕಂಪನಿಯು ಪ್ರಸಕ್ತ ಇದ್ದಂತಹ ಖರೀದಿ ಆದೇಶದ (11 ಸೆಪ್ಟಂಬರ್ 2017) ತಿದ್ದುಪಡಿಯ ಮೂಲಕ ನಿಮಿಷ ಒಂದಕ್ಕೆ 120 ಫ್ಲೀಟ್‌ವ್ರ್ಯಾಪ್‌ಗಳ ವೇಗದೊಂದಿಗಿನ ಯಂತ್ರದ ಸರಬರಾಜಿಗಾಗಿ ಮೆ. ಒಇಪಿಎಲ್, ಇವರು ನೀಡಿದ ಕೊಡುಗೆಯನ್ನು ಕಂಪನಿಯು ತಿರಸ್ಕರಿಸಿತು ಹಾಗೂ ಅದೇ ಯಂತ್ರವನ್ನು ತದನಂತರದಲ್ಲಿ ಅದೇ ಸರಬರಾಜುದಾರರಿಂದ (ಮೆ. ಒಇಪಿಎಲ್) ಹೆಚ್ಚುವರಿ ದರದಲ್ಲಿ ಖರೀದಿಸಿದ್ದು ಸಮರ್ಥನೀಯವಾಗಿರಲಿಲ್ಲ. ಸೋಪುಗಳ ಮಾದರಿಗಳನ್ನು ತಾಂತ್ರಿಕ ಪ್ರಸ್ತುತಿಯ ಸಮಯದಲ್ಲಿ ಮೆ. ಒಇಪಿಎಲ್, ಇವರಿಗೆ ನೀಡಲಾಯಿತು ಎಂಬುದಾಗಿ ತಿಳಿಸಲಾಯಿತಾದರೂ, ಸರಬರಾಜುದಾರರ ಸವಾಲನ್ನು ಒಪ್ಪಿಕೊಳ್ಳುವ ಮೊದಲು ಯಂತ್ರವು ಅಗತ್ಯವಿದ್ದಂತಹ ಕಾರ್ಯಾಚರಣೆ ವೇಗವನ್ನು ಸಾಧಿಸುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಕಂಪನಿಯು ವಿಫಲಗೊಂಡಿತ್ತು.

ಕಂಪನಿಯು ₹ 1.08 ಕೋಟಿ ಮೊತ್ತದಷ್ಟು ಅಧಿಕ/ಹೆಚ್ಚುವರಿ ವೆಚ್ಚವನ್ನು ಭರಿಸಿತಾದರೂ ವ್ರಾಪಿಂಗ್ ಪ್ರಕ್ರಿಯೆಯನ್ನು ಸ್ವಯಂಚಾಲಿತಗೊಳಿಸುವ ಮೂಲಕ ಸಿಬ್ಬಂದಿ ಸಂಖ್ಯೆಯನ್ನು ತಗ್ಗಿಸುವ ತನ್ನ ಉದ್ದೇಶವನ್ನು, ಅದರ ಪರಿಕಲ್ಪನೆಯು ಮೂಡಿ ಐದು ವರ್ಷಗಳು (2016–2021) ಕಳೆದನಂತರವೂ ಸಾಧಿಸಿಕೊಳ್ಳಲಾಗಿರುವುದಿಲ್ಲ. ಅಲ್ಲದೆಯೇ, ಯಂತ್ರವನ್ನು ಫೆಬ್ರವರಿ 2020ರಿಂದಲೂ ಉಪಯೋಗಿಸದೇ ಬಿಟ್ಟಿರುವುದರಿಂದ, ಮೆ. ಒಇಪಿಎಲ್, ಇವರಿಗೆ ಮುಂಗಡವಾಗಿ ಪಾವತಿಸಲಾಗಿರುವಂತಹ ₹ 96.05 ಲಕ್ಷ ಮೊತ್ತವು ನಿಷ್ಫಲವಾಗಿ ಉಳಿದಿದೆ.

**ಫ್ಲೀಟ್ ವ್ರಾಪಿಂಗ್ ಯಂತ್ರವನ್ನು ಹೆಚ್ಚುವರಿ ದರದಲ್ಲಿ ಖರೀದಿಸಲು ಕಾರಣವಾದ ತೀರ್ಮಾನವನ್ನು ತೆಗೆದುಕೊಂಡಂತಹ ದರ ಸಂಧಾನ ಸಮಿತಿಯ ಮೇಲೆ ಜವಾಬ್ದಾರಿಯನ್ನು ಹೊರಿಸತಕ್ಕದ್ದು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತದೆ.**

[153] ಗುತ್ತಿಗೆ ಮೌಲ್ಯ ₹ 3.98 ಕೋಟಿ x ಶೇಕಡಾ 5.

**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**

## *2.6. ಗುತ್ತಿಗೆದಾರರಿಗೆ ಮಾಡಿದ ಅನರ್ಹ ಸಹಾಯ*

**ಟೆಂಡರು ಷರತ್ತಿಗೆ ವಿರುದ್ಧವಾಗಿ ಸೇವಾ ತೆರಿಗೆ ಬಾಧ್ಯತೆಯನ್ನು ಕಂಪನಿಯು ಭರಿಸಲು ತೆಗೆದುಕೊಂಡಂತಹ ತೀರ್ಮಾನವು ಗುತ್ತಿಗೆದಾರರಿಗೆ ₹ 97.46 ಲಕ್ಷ ಮೊತ್ತದಷ್ಟು ಅನರ್ಹ ಸಹಾಯವನ್ನು ಮಾಡಿಕೊಡುವಲ್ಲಿ ಪರಿಣಮಿಸಿತು.**

ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು[154] (ಕಂಪನಿ) ₹ 12.36 ಕೋಟಿ ಅಂದಾಜು ವೆಚ್ಚದಲ್ಲಿ ಮಂಗಳೂರಿನಲ್ಲಿ ತನ್ನ ಸಾಂಸ್ಥಿಕ ಕಚೇರಿ ನಿರ್ಮಾಣ ಮಾಡುವ ಸಲುವಾಗಿ ಟೆಂಡರನ್ನು ಆಹ್ವಾನಿಸಿತು (ಮೇ 2013). ಟೆಂಡರಿನ[155] ಷರತ್ತಿನ ಅನುಸಾರ, ಎಲ್ಲಾ ಸುಂಕಗಳು, ತೆರಿಗೆಗಳು ಹಾಗೂ ಪಾವತಿಸಬೇಕಾದ ವಿಧಿಸುವಿಕೆಗಳನ್ನು ಟೆಂಡರಿನಲ್ಲಿ ಸೇರಿಸಬೇಕಿತ್ತು ಹಾಗೂ ಗುತ್ತಿಗೆದಾರರು ಘೋಷಿಸುವ ದರಗಳು ಗುತ್ತಿಗೆಯ ಕಾರ್ಯನಿರ್ವಹಣೆಗಾಗಿ ಪಾವತಿಸಬೇಕಾದಂತಹ ಮಾರಾಟಗಳ ಮೇಲಿನ ತೆರಿಗೆಗಳು ಹಾಗೂ ಇತರೆ ತೆರಿಗೆಗಳನ್ನು ಒಳಗೊಂಡಿರುವುದು ಎಂಬುದಾಗಿ ಪರಿಗಣಿಸಲಾಗಿತ್ತು. ಈ ನಿಟ್ಟಿನಲ್ಲಿ ಗುತ್ತಿಗೆದಾರರಿಗೆ ಯಾವುದೇ ರೀತಿಯ ಹೆಚ್ಚುವರಿ ಪಾವತಿಗಳಿಗೆ ಅವಕಾಶವಿರಲಿಲ್ಲ. ಕಂಪನಿಯು ಸೇವಾ ತೆರಿಗೆ ವಸೂಲಾತಿಗೆ ಸಂಬಂಧಿಸಿದಂತೆ ಒಂದು ಪ್ರಶ್ನೆಗೆ ಪ್ರಸಕ್ತ ಜಾರಿಯಲ್ಲಿರುವಂತಹ ಸರ್ಕಾರದ/ಕಂಪನಿಯ ಆದೇಶಗಳ ಅನುಸಾರ ಎಲ್ಲಾ ತೆರಿಗೆಗಳನ್ನು ಬಿಲ್ಲುಗಳಿಂದ ಮೂಲದಲ್ಲಿಯೇ ಕಡಿದುಕೊಳ್ಳಲಾಗುವುದು ಎಂಬುದಾಗಿ ಕಂಪನಿಯು ಸವಾಲು-ಪೂರ್ವ ಸಭೆಯಲ್ಲಿ (ಜುಲೈ 2013) ಸ್ಪಷ್ಟನೆಯನ್ನೂ ಸಹ ನೀಡಿತ್ತು.

ಕಾಮಗಾರಿಯನ್ನು ಅತ್ಯಂತ ಕಡಿಮೆ ದರವನ್ನು ಘೋಷಿಸಿದ್ದಂತಹ ಸವಾಲುದಾರರಿಗೆ, ಅವರೆಂದರೆ ಶ್ರೀ ಪ್ರಭಾಕರ ಯೆಯ್ಯಡಿ (ಗುತ್ತಿಗೆದಾರರು) ಅವರು ಘೋಷಿಸಿದ್ದಂತಹ ₹ 13.71 ಕೋಟಿ ಮೊತ್ತಕ್ಕೆ (ಅಕ್ಟೋಬರ್ 2013) ಹಾಗೂ ಕೆಲವು ಹೆಚ್ಚುವರಿ ಕಾಮಗಾರಿಗಳನ್ನು[156] ವಹಿಸಿದನಂತರ (ಮೇ 2015/ಜುಲೈ 2015) ಪರಿಷ್ಕರಿಸಿಸಲಾದ ₹ 18.53 ಕೋಟಿ ಮೊತ್ತಕ್ಕೆ ನೀಡಲಾಯಿತು. ಕಾಮಗಾರಿಯು ₹ 18.43 ಕೋಟಿ ಒಟ್ಟಾರೆ ವೆಚ್ಚದಲ್ಲಿ ಫೆಬ್ರವರಿ 2017ರಲ್ಲಿ ಪೂರ್ಣಗೊಂಡಿತು.

ಒಟ್ಟಾರೆ ವೆಚ್ಚ ₹ 18.43 ಕೋಟಿ ಮೊತ್ತವು ಗುತ್ತಿಗೆದಾರರಿಗೆ ಪಾವತಿಸಲಾದ ₹ 97.46 ಲಕ್ಷ ಮೊತ್ತದಷ್ಟು ಸೇವಾ ತೆರಿಗೆಯನ್ನೂ ಒಳಗೊಂಡಿತ್ತು. ಟೆಂಡರಿಗೆ ಇಡಲಾಗಿದ್ದಂತಹ ಅಂದಾಜು ವೆಚ್ಚವು ಸೇವಾ ತೆರಿಗೆ ಪಾವತಿಯ ಭಾಗವನ್ನು ಒಳಗೊಂಡಿರಲಿಲ್ಲ ಎಂಬುದಾಗಿ ಗುತ್ತಿಗೆದಾರರು ಮಾಡಿದ ಕೋರಿಕೆಯ ಮೇರೆಗೆ (ಫೆಬ್ರವರಿ 2015) ಸೇವಾ ತೆರಿಗೆಯನ್ನು ಪಾವತಿ ಮಾಡಲಾಗಿತ್ತು. ಕಂಪನಿಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರು (ಇಇ-ಸಿವಿಲ್), ಗುತ್ತಿಗೆದಾರರ ಕೋರಿಕೆಯ ಪ್ರಸ್ತಾವನೆಯನ್ನು ಮಂಡಿಸುವ ವೇಳೆಯಲ್ಲಿ, ಟೆಂಡರಿಗೆ ಇಡಲಾಗಿದ್ದಂತಹ ಅಂದಾಜು ವೆಚ್ಚವು ಸೇವಾ ತೆರಿಗೆಯನ್ನು ಒಳಗೊಂಡಿರುವುದಿಲ್ಲ, ತಾವು ಘೋಷಿಸಿರುವ ದರಗಳು ಸೇವಾ ತೆರಿಗೆಗಳನ್ನು ಒಳಗೊಂಡಿರುವುದಿಲ್ಲ ಎಂಬುದಾಗಿ ಗುತ್ತಿಗೆದಾರರು ತಿಳಿಸಿರುವರು, ಹಾಗೂ ಟೆಂಡರುಗಳನ್ನು ಆಹ್ವಾನಿಸುವ ವೇಳೆಯಲ್ಲಿ ಸೇವಾ ತೆರಿಗೆಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಸ್ಪಷ್ಟನೆಗಳನ್ನು ನೀಡಿರಲಿಲ್ಲ ಎಂಬುದನ್ನು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದ್ದರು (ಫೆಬ್ರವರಿ/ಮಾರ್ಚ್ 2015). ಈ ಪ್ರಸ್ತಾವನೆಗೆ ಲೆಕ್ಕಪತ್ರಗಳ ನಿಯಂತ್ರಕರು (ಆಂತರಿಕ ಲೆಕ್ಕಪರಿಶೋಧನೆ), ಇವರು ಶಿಫಾರಸು ಮಾಡಿದರು ಹಾಗೂ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರವರು ಅದಕ್ಕೆ ಅನುಮೋದನೆ ನೀಡಿದರು (ಏಪ್ರಿಲ್/ಸೆಪ್ಟಂಬರ್ 2015).

ಟೆಂಡರುಗಳನ್ನು ಆಹ್ವಾನಿಸುವ ವೇಳೆಯಲ್ಲಿ ಸೇವಾ ತೆರಿಗೆಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಸ್ಪಷ್ಟನೆಗಳನ್ನು ನೀಡಿರಲಿಲ್ಲ ಎಂಬುದಾಗಿ EE (ಸಿವಿಲ್), ಇವರು ಮಾಡಿರುವ ಪ್ರಸ್ತಾವನೆಯು ವಾಸ್ತವಿಕವಾಗಿ ತಪ್ಪಿನಿಂದ ಕೂಡಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಗುತ್ತಿಗೆದಾರರೂ ಸಹ ಹಾಜರಿದ್ದಂತಹ ಸವಾಲು-ಪೂರ್ವ ಸಭೆಯಲ್ಲಿ (ಜುಲೈ 2013) ಈ ನಿಟ್ಟಿನಲ್ಲಿ ನಿರ್ದಿಷ್ಟ

---

154 ಒಂದು ರಾಜ್ಯ ವಿದ್ಯುತ್ ವಿತರಣಾ ಕಂಪನಿ.

155 ಟೆಂಡರುದಾರರುಗಳಿಗೆ ನಿರ್ದೇಶನಗಳ ಷರತ್ತು 11.3, ಗುತ್ತಿಗೆಯ ಷರತ್ತುಗಳ ಷರತ್ತು 39.1, ಸವಾಲುದಾರರುಗಳಿಗೆ ಹೆಚ್ಚುವರಿ ಷರತ್ತುಗಳು/ಮಾರ್ಗಸೂಚಿಗಳ ಷರತ್ತು 9 ಹಾಗೂ ಷರತ್ತು 10.2.

156 ಹೆಚ್ಚುವರಿ ಅಂತಸ್ತು, ಕಾಂಪೌಂಡ್ ಗೋಡೆ ನಿರ್ಮಾಣ, ರಸ್ತೆ ನಿರ್ಮಾಣ, ಇತ್ಯಾದಿ.

ಸ್ಪಷ್ಟನೆಗಳನ್ನು ನೀಡಲಾಗಿತ್ತು. ಈ ಅಂಶವನ್ನು ಇಇ (ಸಿವಿಲ್)/ಲೆಕ್ಕಪತ್ರಗಳ ನಿಯಂತ್ರಕರು (ಆಂತರಿಕ ಲೆಕ್ಕಪರಿಶೋಧನೆ), ಇವರ ಪ್ರಸ್ತಾವನೆಗಳಲ್ಲಿ ತಿಳಿಸಿರಲಿಲ್ಲ. ಮುಂದುವರೆದು, ಗುತ್ತಿಗೆಯ ಷರತ್ತುಗಳ (ಟೆಂಡರುದಾರರಿಗೆ ನಿರ್ದೇಶನಗಳ ಷರತ್ತು 11.3 ಹಾಗೂ ಗುತ್ತಿಗೆಯ ಷರತ್ತುಗಳ ಷರತ್ತು 39.1) ಅನುಸಾರ ಗುತ್ತಿಗೆದಾರರು ತಾವು ಘೋಷಿಸುವ ದರದಲ್ಲಿ ಎಲ್ಲಾ ತೆರಿಗೆಗಳನ್ನು ಸೇರಿಸಬೇಕಿತ್ತಾದ್ದರಿಂದ ಟೆಂಡರಿಗೆ ಇಡಲಾಗಿದ್ದಂತಹ ಅಂದಾಜು ವೆಚ್ಚವು ಸೇವಾ ತೆರಿಗೆಯನ್ನು ಒಳಗೊಂಡಿರಲಿಲ್ಲ ಎಂಬ ವಾದವು ಅಪ್ರಸ್ತುತವಾಗಿತ್ತು. ಅಲ್ಲದೆಯೇ, ಗುತ್ತಿಗೆಯ ವಿಶೇಷ ಷರತ್ತುಗಳ ಅನುಸಾರ, ಕಂಪನಿಯು, ಕಂಪನಿ ಮತ್ತು ಗುತ್ತಿಗೆದಾರರ ನಡುವೆ ವಿವಾದಗಳು ಅಥವಾ ಬಿನ್ನಾಭಿಪ್ರಾಯಗಳು ಉದ್ಭವಿಸಿದಲ್ಲಿ, ಈ ವಿಷಯವನ್ನು ಮಧ್ಯಸ್ಥಿಕೆದಾರರಿಗೆ (ಆರ್ಬಿಟ್ರೇಟರ್) ವಿವಾದ ಪರಿಹಾರಕ್ಕಾಗಿ ಸಲ್ಲಿಸುವ ಆಯ್ಕೆಯನ್ನು ಕಂಪನಿಯು ಹೊಂದಿರುತ್ತದೆ. ಆದಾಗ್ಯೂ, ಕಂಪನಿಯು ಈ ಆಯ್ಕೆಯನ್ನು ಚಲಾಯಿಸಲಿಲ್ಲ.

ಅಂದಾಜನ್ನು ತಯಾರಿಸುವ ವೇಳೆಯಲ್ಲಿ ಹಾಗೂ ಟೆಂಡರುಗಳ ಮೌಲ್ಯಮಾಪನ ಮಾಡುವ ವೇಳೆಯಲ್ಲಿ ಸೇವಾ ತೆರಿಗೆಯನ್ನು ಪರಿಗಣಿಸಿರಲಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಜನವರಿ 2022). ಕಂಪನಿಯು ಸವಾಲು-ಪೂರ್ವ ಸಭೆಯಲ್ಲಿ ಎಲ್ಲಾ ತೆರಿಗೆಗಳನ್ನೂ, ಟೆಂಡರು ಸಮಯದಲ್ಲಿ ಚಾಲ್ತಿಯಲ್ಲಿರುವಂತಹ ಆದೇಶಗಳ ಅನುಸಾರ ಬಿಲ್ಲುಗಳಿಂದ ಮೂಲದಲ್ಲಿಯೇ ಕಡಿದುಕೊಳ್ಳಲಾಗುವುದು ಎಂಬುದಾಗಿ ಸ್ಪಷ್ಟಪಡಿಸಲಾಗಿತ್ತು, ಹಾಗೂ ಸೇವಾ ತೆರಿಗೆಗಳ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ತಿಳಿಸಿರಲಿಲ್ಲ, 'ಎಲ್ಲಾ ತೆರಿಗೆಗಳು' ಅಂದರೆ ಮೌಲ್ಯ ವರ್ಧಿತ ತೆರಿಗೆ, ಕಾರ್ಮಿಕ ಸೆಸ್, ಉದ್ಯೋಗಿಗಳ ಭವಿಷ್ಯ ನಿಧಿ, ಉದ್ಯೋಗಿಗಳ ರಾಜ್ಯ ವಿಮೆ, ಇತ್ಯಾದಿ, ಆದರೆ ಸೇವಾ ತೆರಿಗೆಯಲ್ಲ.

"ಎಲ್ಲಾ ಸುಂಕಗಳು, ತೆರಿಗೆಗಳು ಹಾಗೂ ಗುತ್ತಿಗೆದಾರರು ಗುತ್ತಿಗೆ ಅಡಿಯಲ್ಲಿ ಅಥವಾ ಇತರೆ ಯಾವುದೇ ಷರತ್ತುಗಳ ಅಡಿಯಲ್ಲಿ ಪಾವತಿಸಬೇಕಾದಂತಹ ಇತರೆ ವಿಧಿಸಬೇಕಾದವುಗಳನ್ನು, ದರಗಳು, ಮೌಲ್ಯಗಳು ಹಾಗೂ ಟೆಂಡರುದಾರರು ಸಲ್ಲಿಸುವ ಒಟ್ಟಾರೆ ಟೆಂಡರು ಮೌಲ್ಯದಲ್ಲಿ ಸೇರಿಸತಕ್ಕದ್ದು" ಎಂಬುದಾಗಿ ಟೆಂಡರು ಷರತ್ತುಗಳು ನಿರ್ದಿಷ್ಟಪಡಿಸಿರುವುದರಿಂದ ಅಂದಾಜುಗಳು ಸೇವಾ ತೆರಿಗೆಯನ್ನು ಒಳಗೊಂಡಿರುವುದಿಲ್ಲ ಎಂಬುದು ಅಪ್ರಸ್ತುತವಾಗಿತ್ತು. ಅಲ್ಲದೆಯೇ, ಕಂಪನಿಯು ಸವಾಲು-ಪೂರ್ವ ಸಭೆಯಲ್ಲಿ ಸೇವಾ ತೆರಿಗೆ ವಸೂಲಾತಿಯ ಮೇಲೆ ಸ್ಪಷ್ಟನೆಯನ್ನು ನೀಡಿತ್ತು. ಅಲ್ಲದೆಯೇ, ಉತ್ತರದಲ್ಲಿ ವಾದಿಸಿರುವಂತೆ, 'ಎಲ್ಲಾ ತೆರಿಗೆಗಳು' ಸೇವಾ ತೆರಿಗೆಯನ್ನು ಒಳಗೊಂಡಿರುವುದಿಲ್ಲ ಎಂಬುದಾಗಿ ಟೆಂಡರು ದಾಖಲೆಯು ವಿವರಿಸಿರುವುದಿಲ್ಲ.

ಆದ್ದರಿಂದ, ಟೆಂಡರಿಗೆ ಇಡಲಾಗಿದ್ದಂತಹ ಅಂದಾಜು ಸೇವಾ ತೆರಿಗೆಯನ್ನು ಒಳಗೊಂಡಿರಲಿಲ್ಲ ಹಾಗೂ ಟೆಂಡರನ್ನು ಆಹ್ವಾನಿಸುವ ವೇಳೆಯಲ್ಲಿ ಯಾವುದೇ ಸ್ಪಷ್ಟನೆಯನ್ನೂ ನೀಡಿರಲಿಲ್ಲ ಎಂಬ ಕಾರಣದ ಮೇರೆಗೆ ಸೇವಾ ತೆರಿಗೆ ಬಾಧ್ಯತೆಯನ್ನು ಭರಿಸುವ ಸಲುವಾಗಿ ಕಂಪನಿಯು ತೆಗೆದುಕೊಂಡಂತಹ ತೀರ್ಮಾನವು ಟೆಂಡರು ಷರತ್ತುಗಳ ಉಲ್ಲಂಘನೆಯಲ್ಲಿ ಹಾಗೂ ಗುತ್ತಿಗೆದಾರರಿಗೆ ₹ 97.46 ಲಕ್ಷ ಮೊತ್ತದಷ್ಟು ಅನರ್ಹ ಹಣಕಾಸಿನ ಸಹಾಯ ಮಾಡುವಲ್ಲಿ ಪರಿಣಮಿಸಿತು.

**ಸೇವಾ ತೆರಿಗೆಗೆ ಸಂಬಂಧಿಸಿದಂತೆ ಸವಾಲು-ಪೂರ್ವ ಸಭೆಯಲ್ಲಿ ನೀಡಲಾದಂತಹ ಸ್ಪಷ್ಟನೆಯನ್ನು ಆಡಳಿತ ಮಂಡಳಿಗೆ ಸಮರ್ಪಕವಾಗಿ ವಿವರಿಸುವಲ್ಲಿ ತಪ್ಪಿತಸ್ಥರಾಗಿರುವಂತಹ ಸಂಬಂಧಿತ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿಗದಿಗೊಳಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತದೆ.**

**ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ**

## 2.7. ಗುತ್ತಿಗೆದಾರರುಗಳಿಗೆ ಅನರ್ಹ ಸಹಾಯವನ್ನು ಮಾಡಿಕೊಟ್ಟಿದ್ದುದು

**ಪ್ರಾಧಿಕಾರವು ರಿಯಾಯಿತಿ ಒಡಂಬಡಿಕೆಗಳ ಅನುವುಗಳನ್ನು ಉಲ್ಲಂಘಿಸಿ ರಿಯಾಯಿತಿದಾರರುಗಳಿಗೆ ₹ 63.63 ಕೋಟಿ ಮೊತ್ತದಷ್ಟು ಅವಧಿಗೆ ಮುಂಚಿತವಾಗಿ ಪೂರ್ಣಗೊಳಿಸುವಿಕೆಗಾಗಿನ ಬೋನಸ್ ಪಾವತಿಸಿತು.**

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಪ್ರಾಧಿಕಾರ) ಹಾಗೂ ಮೂವರು ರಿಯಾಯಿತಿದಾರರುಗಳು[157] 180.59 ಕಿಮೀಗಳಷ್ಟು ಉದ್ದದ ರಸ್ತೆಯನ್ನು ದ್ವಿಪಥದ ಪ್ರಮಾಣಕಕ್ಕೆ[158] 730 ದಿನಗಳಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ ಮೂರು ರಿಯಾಯಿತಿ ಒಡಂಬಡಿಕೆಗಳನ್ನು ಮಾಡಿಕೊಂಡವು (ಡಿಸೆಂಬರ್ 2015). ರಿಯಾಯಿತಿ ಒಡಂಬಡಿಕೆಯ ಕಲಮು 28.1 ಒಟ್ಟಾರೆ ಯೋಜನಾ ಹೆದ್ದಾರಿಯು ಪೂರ್ಣಗೊಂಡನಂತರವಷ್ಟೇ ರಿಯಾಯಿತಿದಾರರುಗಳಿಗೆ ಯೋಜನೆಯನ್ನು ನಿಗದಿತ ಅವಧಿಗೆ ಮುಂಚಿತವಾಗಿ ಪೂರ್ಣಗೊಳಿಸಿದ್ದಕ್ಕಾಗಿ ಬೋನಸ್ಸಿನ (ಇಸಿಬಿ[159]) ಪಾವತಿಗೆ ಅನುವು ಮಾಡಿರುವುದು. ರಿಯಾಯಿತಿ ಒಡಂಬಡಿಕೆಯ ಕಲಮು 15.1ರ ಅನುಸಾರ, ದ್ವಿಪಥದ ಪ್ರಮಾಣಕ[160] ಕಾಮಗಾರಿಯು ಪೂರ್ಣಗೊಂಡಿರುವಿಕೆ ಪ್ರಮಾಣಪತ್ರ (ಸಿಸಿ) ಅಥವಾ ತಾತ್ಕಾಲಿಕ ಪ್ರಮಾಣಪತ್ರವನ್ನು (ಪಿಸಿ) ಸ್ವತಂತ್ರ ಇಂಜಿನಿಯರ್‌ರವರು ನೀಡಿದಂದು ಪೂರ್ಣಗೊಂಡಿರುವುದೆಂದು ಪರಿಗಣಿಸಲಾಗುವುದು ಮತ್ತು ಸಿಸಿ ಅಥವಾ ಪಿಸಿ ನೀಡಿದ ದಿನಾಂಕವು ವಾಣಿಜ್ಯಿಕ ಕಾರ್ಯಾಚರಣಾ ದಿನವಾಗುವುದು. ಇದು, ಷೆಡ್ಯೂಲು 'ಐ' ಹಾಗೂ 'ಎಲ್'ನಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಷರತ್ತುಗಳು, ಅಂದರೆ ಮೂರನೇ ತಂಡದಿಂದ ನಡೆಸಲ್ಪಟ್ಟಿರುವಂತಹ ರಸ್ತೆ ಸುರಕ್ಷತೆ ಲೆಕ್ಕಪರಿಶೋಧನೆ ಹಾಗೂ ಪರೀಕ್ಷಣೆಗಳ ಷರತ್ತಿಗೆ ಒಳಪಟ್ಟಿರುತ್ತದೆ, ಆದರೆ ಭಾಗಶಃವಾಗಿ ಪೂರ್ಣಗೊಂಡಿರುವಂತಹ ಕಾಮಗಾರಿಯ ಮೇಲೆ ಯೋಜನೆಯನ್ನು ನಿಗದಿತ ಅವಧಿಗೆ ಮುಂಚಿತವಾಗಿ ಪೂರ್ಣಗೊಳಿಸಿದ್ದಕ್ಕಾಗಿ ಬೋನಸ್ಸನ್ನು ನೀಡಲು ಅನುವು ಮಾಡಿರುವುದಿಲ್ಲ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ವಾಣಿಜ್ಯ ಕಾರ್ಯಾಚರಣೆ ದಿನಾಂಕವನ್ನು ಟಿಎಲ್‌ಎಸ್‌ಡಿಗೆ ಆರು ತಿಂಗಳುಗಳ ಮುಂಚಿತವಾಗಿ ಸಾಧಿಸಲಾಗಿತ್ತು ಎಂಬುದಾಗಿ ಸ್ವತಂತ್ರ ಇಂಜಿನಿಯರ್‌ರವರು ಮಾಡಿದ ಶಿಫಾರಸಿನ ಮೇರೆಗೆ ರಿಯಾಯಿತಿದಾರರುಗಳಿಗೆ ಯೋಜನೆಯನ್ನು ನಿಗದಿತ ಅವಧಿಗೆ ಮುಂಚಿತವಾಗಿ ಪೂರ್ಣಗೊಳಿಸಿದ್ದಕ್ಕಾಗಿ ₹ 63.63 ಕೋಟಿ ಮೊತ್ತದಷ್ಟು ಬೋನಸ್ಸನ್ನು (ಇಸಿಬಿ) ಪಾವತಿಸಿತು. ವಹಿಸಲಾಗಿದ್ದಂತಹ ರಸ್ತೆಯ ಉದ್ದ, ಬೋನಸ್ ಪಡೆಯುವ ಉದ್ದೇಶದಿಂದ ಕಾಮಗಾರಿಯು ಪೂರ್ಣಗೊಳ್ಳಲು ನಿಗದಿತ ದಿನಾಂಕ, ತಾತ್ಕಾಲಿಕ ಪ್ರಮಾಣಪತ್ರ ನೀಡಿದ ದಿನಾಂಕ, ಪರಿಗಣಿಸಲಾದ ವಾಣಿಜ್ಯ ಕಾರ್ಯಾಚರಣೆಯ ದಿನಾಂಕವು ಜಾರಿಗೆ ಬಂದ ದಿನಾಂಕ, ಪಾವತಿಸಲಾದ ಬೋನಸ್ಸು, ಇತ್ಯಾದಿ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

---

[157] ಮೆ. ಡಿಬಿಎಲ್, ಹಾಸನ ಪಿರಿಯಾಪಟ್ಟಣ ಟೋಲ್‌ವೇಸ್ ಲಿಮಿಟೆಡ್, ಮೆ. ಡಿಬಿಎಲ್ ಹಿರೇಕೇರೂರು, ರಾಣಿಬೆನ್ನೂರು ಟೋಲ್‌ವೇಸ್ ಲಿಮಿಟೆಡ್ ಮತ್ತು ಮೆ. ಡಿಬಿಎಲ್ ಮುಂಡರಗಿ ಹುನಗುಂದ ಟೋಲ್‌ವೇಸ್ ಲಿಮಿಟೆಡ್.

[158] ಕಡಿಮೆ ಗಾತ್ರದ ಸಾರಿಗೆ ಹೆದ್ದಾರಿಗಳು

[159] ಯೋಜನೆಯನ್ನು ದ್ವಿಪಥದ ಪ್ರಮಾಣಕ ದಿನಾಂಕಕ್ಕೆ ಆರು ತಿಂಗಳುಗಳು ಅಥವಾ ಅದಕ್ಕೂ ಮುಂಚಿತವಾಗಿ ಪೂರ್ಣಗೊಳಿಸಿದಾಗ ಬೋನಸ್ಸು ಒಂದು ವರ್ಷಾಶನ ಕಂತಿಗೆ ಸಮನಾಗಿರುತ್ತದೆ

[160] ದ್ವಿಪಥದ ಪ್ರಮಾಣಕ ಹೆದ್ದಾರಿಯ ಕಾಮಗಾರಿಗಳಲ್ಲಿ ಸೇರಿಸಲಾಗಿರುವ ಅಥವಾ ಅದರ ಒಂದು ಭಾಗವಾಗಿರುವಂತಹ ಎಲ್ಲಾ ಕಾಮಗಾರಿಗಳ ನಿರ್ಮಾಣ ಹಾಗೂ ಪೂರ್ಣಗೊಳಿಸುವಿಕೆ.

**ಕೋಷ್ಟಕ ಸಂಖ್ಯೆ: 2.7.1: ಬೋನಸ್ಸು ಪಾವತಿಗಾಗಿ ಪರಿಗಣಿಸಲಾದ ರಸ್ತೆಗಳ ವಿವರ**

| ಪ್ಯಾಕೇಜು ಸಂಖ್ಯೆ | ರಸ್ತೆಯ ಒಟ್ಟಾರೆ ಉದ್ದ ಕಿಮೀ ಗಳಲ್ಲಿ | ರಿಯಾಯಿತಿದಾರರ ಹೆಸರು | ದ್ವಿಪಥದ ಪ್ರಮಾಣಕದ ದಿನಾಂಕ (ಟಿವಿಎಲ್ಎಸ್‌ಡಿ) | ಬೋನಸ್ಸು ಅರ್ಹತೆ ಪಡೆಯಲು ಪೂರ್ಣಗೊಳಿಸ ಬೇಕಾದ ನಿಗದಿತ ದಿನಾಂಕ | ಭಾಗಶಃವಾಗಿ ಪೂರ್ಣ ಗೊಳಿಸಿದ್ದಕ್ಕಾಗಿ ಸ್ವತಂತ್ರ ಇಂಜಿನಿಯರ್ ರವರು ತಾತ್ಕಾಲಿಕ ಪ್ರಮಾಣಪತ್ರವನ್ನು (ಪಿಸಿ) ನೀಡಿದ ದಿನಾಂಕ | ಪರಿಗಣಿಸಲಾದ ವಾಣಿಜ್ಯ ಕಾರ್ಯಾಚರಣೆ ದಿನಾಂಕ/ ಸ್ವತಂತ್ರ ಇಂಜಿನಿಯರ್‌ರವರು ಪ್ರಮಾಣೀಕರಿಸಿರು ವಂತೆ ತಾತ್ಕಾಲಿಕ ಪ್ರಮಾಣಪತ್ರವು ಜಾರಿಗೆ ಬಂದಿರುವ ದಿನಾಂಕ | ತಾತ್ಕಾಲಿಕ ಪ್ರಮಾಣಪತ್ರದ ಅನುಸಾರ ಸ್ವತಂತ್ರ ಇಂಜಿನಿಯರ್ ರವರು ಪೂರ್ಣಗೊಂಡಿರು ವುದಾಗಿ ಪ್ರಮಾಣೀಕರಿಸ ಲಾಗಿರುವ ರಸ್ತೆಯ ಉದ್ದ (ಕಿಮೀನಲ್ಲಿ) | ಒಂದು ವರ್ಷಾಶನಕ್ಕೆ ಸಮನಾದ ಮೊತ್ತಕ್ಕೆ ಪಾವತಿಸಲಾದ ಬೋನಸ್ಸು (₹ ಕೋಟಿಯಲ್ಲಿ) |
|---|---|---|---|---|---|---|---|---|
| ಡಬ್ಲ್ಯು ಸಿಪಿ 3 | 73.69 | ಮೆ. ಡಿಬಿಎಲ್ ಹಾಸನ ಪಿರಿಯಾ ಪಟ್ಟಣ ಟೋಲ್‌ವೇಸ್ ಲಿಮಿಟೆಡ್ | 28/9/2018 | 28/03/2018 | 06/04/2018 | 28/02/2018 | 71.94 | 26.28 |
| ಡಬ್ಲ್ಯು ಸಿಪಿ–5 | 55.693 | ಮೆ. ಡಿಬಿಎಲ್ ಹಿರೇಕೆರೂರು ರಾಣಿಬೆನ್ನೂರು ಟೋಲ್‌ವೇಸ್ ಲಿಮಿಟೆಡ್ | 29/9/2018 | 29/03/2018 | 30/03/2018 | 24/02/2018 | 50.071 | 19.62 |
| ಡಬ್ಲ್ಯು ಸಿಪಿ–6 | 51.206 | ಮೆ. ಡಿಬಿಎಲ್ ಮುಂಡರಗಿ ಹುನಗುಂದ ಟೋಲ್‌ವೇಸ್ ಲಿಮಿಟೆಡ್ | 28/9/2018 | 28/03/2018 | 31/03/2018 | 05/02/2018 | 45.43 | 17.73 |
| ಒಟ್ಟು | **180.589** | | | | | | **167.441** | **63.63** |

ಯೋಜನೆಯನ್ನು ನಿಗದಿತ ಅವಧಿಗೆ ಮುಂಚಿತವಾಗಿ ಪೂರ್ಣಗೊಳಿಸಿದ್ದಕ್ಕಾಗಿ ರಿಯಾಯಿತಿ ಒಡಂಬಡಿಕೆಯಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ಪೂರೈಸಿರಲಿಲ್ಲ ಹಾಗೂ ಈ ಕೆಳಗಿನ ಕಾರಣಗಳಿಂದಾಗಿ ಪಾವತಿಸಲಾಗಿದ್ದಂತಹ ಬೋನಸ್ಸು ನಿಯಮಬಾಹಿರವಾಗಿತ್ತು ಎಂಬುದನ್ನು ದಾಖಲೆಗಳ ಪರಿಶೀಲನೆಯು ತೋರಿಸಿಕೊಟ್ಟಿತು:

- ನಿಗದಿತ ದ್ವಿಪಥದ ಪ್ರಮಾಣಕವನ್ನು ರಿಯಾಯಿತಿದಾರರು ನಿಗದಿತಗೊಳಿಸಲಾಗಿರುವ ಮೈಲಿಕಲ್ಲುಗಳಿಗಿಂತ (ಷೆಡ್ಯೂಲು 'ಜಿ') ಮುಂಚಿತವಾಗಿ ಪೂರ್ಣಗೊಳಿಸಲು ಪ್ರಸ್ತಾಪಿಸಲಾಗಿದ್ದಲ್ಲಿ, ರಿಯಾಯಿತಿದಾರರುಗಳು ಪರಿಷ್ಕೃತ ಮೈಲಿಕಲ್ಲುಗಳನ್ನು (i) ಪರೀಕ್ಷಣೆಗಳನ್ನು ನಡೆಸುವ ವ್ಯವಸ್ಥೆ ಮಾಡುವ ಸಲುವಾಗಿ (ii) ಯೋಜನಾ ಹೆದ್ದಾರಿಗಳ ಸುರಕ್ಷತಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವ ಸಲುವಾಗಿ ಸಮಾಲೋಚಕರ ನೇಮಕಾತಿಗಾಗಿ, (iii) ಪೂರ್ಣಗೊಂಡಿರುವ ಅನುಮೋದಿತ ಪರಿಷ್ಕೃತ ದಿನಾಂಕದಿಂದ ಟೋಲ್ ಶುಲ್ಕವನ್ನು ವಿಧಿಸುವ ಸಲುವಾಗಿ ಟೆಂಡರು ಪ್ರಕ್ರಿಯೆಯನ್ನು ಪ್ರಾರಂಭಿಸುವ ಸಲುವಾಗಿ ಸ್ವತಂತ್ರ ಇಂಜಿನಿಯರ್‌ರವರ ತಕ್ಕುದಾದ ರೀತಿಯಲ್ಲಿನ ಶಿಫಾರಸಿನೊಂದಿಗೆ ಸಕ್ಷಮ ಅಧಿಕಾರಿಯವರ ಅನುಮೋದನೆಗಾಗಿ ಸಲ್ಲಿಸತಕ್ಕದ್ದು. ಮೈಲಿಗಲ್ಲುಗಳನ್ನು ಪರಿಷ್ಕರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ರೀತಿಯಾಗಿ, ಪರಿಷ್ಕೃತ ಪೂರ್ಣಗೊಂಡಿರುವ ದಿನಾಂಕಕ್ಕೆ ಸಂಬಂಧಿಸಿದಂತೆ ಪರೀಕ್ಷಣೆಗಳನ್ನು ನಡೆಸುವ ಹಾಗೂ ಸುರಕ್ಷತಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವ ಸಲುವಾಗಿ ಪ್ರಾಧಿಕಾರವು ಸಮಾಲೋಚಕರುಗಳನ್ನು ನೇಮಕ ಮಾಡುವ ಅಗತ್ಯತೆಯು ಉದ್ಭವಿಸುವುದಿಲ್ಲ.

- ತಾತ್ಕಾಲಿಕ ಪ್ರಮಾಣಪತ್ರವನ್ನು ನೀಡಿದ ದಿನಾಂಕವು ಯೋಜನೆಯ ವಾಣಿಜ್ಯ ಕಾರ್ಯಾಚರಣೆಗಳ ದಿನಾಂಕವಾಗಿರುತ್ತದೆ. ಆದಾಗ್ಯೂ, ಈ ಎಲ್ಲಾ ಪ್ರಕರಣಗಳಲ್ಲಿ ತಾತ್ಕಾಲಿಕ ಪ್ರಮಾಣಪತ್ರಗಳನ್ನು ಸ್ವತಂತ್ರ ಇಂಜಿನಿಯರುಗಳು ತಾತ್ಕಾಲಿಕ ಪ್ರಮಾಣಪತ್ರವನ್ನು[161] ನೀಡಿದ ವಾಸ್ತವಿಕ ದಿನಾಂಕಕ್ಕೆ ಬದಲಾಗಿ ಯೋಜನಾ ಹೆದ್ದಾರಿಗಳು ಇನ್ನೂ ಮುಂಚಿನ ದಿನಾಂಕಗಳಲ್ಲಿ ವಾಣಿಜ್ಯ ಕಾರ್ಯಾಚರಣೆಯೊಳಕ್ಕೆ ಪ್ರವೇಶಿಸಲು ತಾತ್ಕಾಲಿಕವಾಗಿ ಸದೃಢವಾಗಿರುತ್ತವೆ ಎಂಬುದಾಗಿ ಘೋಷಿಸಿ ತಾತ್ಕಾಲಿಕ ಪ್ರಮಾಣಪತ್ರಗಳನ್ನು ಪ್ರಸ್ತಾಪಿಸಿದ್ದರು. ಅಲ್ಲದೆಯೇ,

[161] ಜಾರಿಗೆ ಬರುವ ದಿನಾಂಕವು 28ನೇ ಅಥವಾ 24ನೇ ಅಥವಾ 5ನೇ ಫೆಬ್ರವರಿ 2018 ಎಂಬುದಾಗಿ ದಾಖಲಿಸಿ ತಾತ್ಕಾಲಿಕ ಪ್ರಮಾಣಪತ್ರಗಳನ್ನು 6 ಏಪ್ರಿಲ್ ಅಥವಾ 30 ಮಾರ್ಚ್ ಅಥವಾ 31 ಮಾರ್ಚ್ 2018ರಂದು ನೀಡಲಾಗಿತ್ತು.

ಪ್ರಾಧಿಕಾರವೂ ಸಹ ತಾತ್ಕಾಲಿಕ ಪ್ರಮಾಣಪತ್ರಗಳನ್ನು ಅನುಮೋದಿಸಿತು ಹಾಗೂ ಸ್ವತಂತ್ರ ಇಂಜಿನಿಯರುಗಳು ಪ್ರಸ್ತಾಪಿಸಿದ್ದ ಈ ಮುಂಚಿನ ದಿನಾಂಕಗಳ ವಾಣಿಜ್ಯ ಕಾರ್ಯಾಚರಣೆ ದಿನಾಂಕಗಳನ್ನು ಒಪ್ಪಿಕೊಳ್ಳುವ ಮೂಲಕ ಅವುಗಳನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಮಾಡಿತು, ಇದು ಸುಸ್ಪಷ್ಟವಾಗಿ ರಿಯಾಯಿತಿ ಒಡಂಬಡಿಕೆಯ ಅನುವುಗಳ ಉಲ್ಲಂಘನೆಯಾಗಿತ್ತು.

- ರಿಯಾಯಿತಿದಾರರುಗಳು ಪರಿಷ್ಕೃತ ಮೈಲಿಗಲ್ಲುಗಳನ್ನು ಸಲ್ಲಿಸಿದ್ದಲ್ಲಿ ಹಾಗೂ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದಿದ್ದಲ್ಲಿ, ಸುರಕ್ಷತಾ ಲೆಕ್ಕಪರಿಶೋಧನೆ ಹಾಗೂ ನಿರ್ದಿಷ್ಟಪಡಿಸಲಾಗಿರುವ ಪರೀಕ್ಷಣೆಗಳನ್ನು ಯೋಜಿಸಬಹುದಾಗಿತ್ತು ಹಾಗೂ ಆರು ತಿಂಗಳುಗಳಿಗೆ ಮುಂಚಿತವಾಗಿ ಅಂದರೆ ಬೋನಸ್ಸನ್ನು ಸ್ವೀಕರಿಸಲು ನಿಗದಿತ ಅರ್ಹತಾ ದಿನಾಂಕಕ್ಕೆ ಮುಂಚಿತವಾಗಿ ತಾತ್ಕಾಲಿಕ ಪ್ರಮಾಣಪತ್ರವನ್ನು ನೀಡುವ ಸಲುವಾಗಿ ಪೂರ್ಣಗೊಳಿಸಬಹುದಾಗಿತ್ತು. ಈ ರೀತಿಯಾಗಿದ್ದರೆ ಪೂರ್ವಾನ್ವಯವಾಗುವಂತೆ ವಾಣಿಜ್ಯ ಕಾರ್ಯಾಚರಣೆ ದಿನಾಂಕವನ್ನು ಪರಿಗಣಿಸುವ ಪ್ರಮೇಯವೇ ಬರುತ್ತಿರಲಿಲ್ಲ. ಆದ್ದರಿಂದ, ಬೋನಸ್ ಪಾವತಿಗೆ ಅನುಕೂಲ ಕಲ್ಪಿಸುವ ಸಲುವಾಗಿಯೇ ಮಾನದಂಡವನ್ನು ಬದಲಾವಣೆಗೊಳಿಸಲಾಯಿತು ಎಂಬುದಾಗಿ ಲೆಕ್ಕಪರಿಶೋಧನೆಯು ಅಭಿಪ್ರಾಯಪಡುತ್ತಿದೆ.

- ರಿಯಾಯಿತಿ ಒಡಂಬಡಿಕೆಯ ಯಾವುದೇ ಕಲಮು ತಾತ್ಕಾಲಿಕವಾಗಿ ಪೂರ್ಣಗೊಂಡಿರುವಂತಹ ಯೋಜನೆಗಳಿಗೆ ಬೋನಸ್ ಪಾವತಿಸಲು ಅನುವು ಮಾಡಿರುವುದಿಲ್ಲ. ಬೋನಸ್ ಪಾವತಿಯನ್ನು ನಿಯಂತ್ರಿಸುವ ಕಲಮು (ಕಲಮು 28.1) ನಿಗದಿತ ದ್ವಿಪಥದ ಪ್ರಮಾಣಕ ಷೆಡ್ಯೂಲಿಗೆ ಆರು ತಿಂಗಳು ಅಥವಾ ಇನ್ನೂ ಹೆಚ್ಚಿನ ಅವಧಿಗೆ ಮುಂಚಿತವಾಗಿ ಯೋಜನೆಯನ್ನು ಪೂರ್ಣಗೊಳಿಸಿದಲ್ಲಿ ಮಾತ್ರ ಬೋನಸನ್ನು ಪಾವತಿಸಲಾಗುವುದು ಎಂಬುದಾಗಿ ಸುಸ್ಪಷ್ಟವಾಗಿ ನಿರ್ದಿಷ್ಟಪಡಿಸಿರುವುದು.

ಈ ರೀತಿಯಾಗಿ, ಬೋನಸ್ ಪಾವತಿಯ ಅವಶ್ಯಕತೆಯಿರಲಿಲ್ಲ ಹಾಗೂ ಈ ನಿಟ್ಟಿನಲ್ಲಿ ₹ 63.63 ಕೋಟಿ ಮೊತ್ತದಷ್ಟು ಪಾವತಿಯು ನಿಯಮಬಾಹಿರವಾಗಿತ್ತು.

ಇದಕ್ಕೆ ಉತ್ತರವಾಗಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಇವರು ಈ ಕೆಳಗಿನಂತೆ ಉತ್ತರಿಸಿದರು (ಸೆಪ್ಟಂಬರ್ 2021):

- ಡಬ್ಲ್ಯುಸಿಪಿ 3, ಡಬ್ಲ್ಯುಸಿಪಿ 5 ಹಾಗೂ ಡಬ್ಲ್ಯುಸಿಪಿ 6 ಗುತ್ತಿಗೆಗಳ ರಿಯಾಯಿತಿದಾರರುಗಳು ಅವರುಗಳಿಗೆ ವಹಿಸಿಕೊಡಲಾಗಿದ್ದಂತಹ ನಿವೇಶನದಲ್ಲಿ ನಿಗದಿತ ದಿನಾಂಕಕ್ಕೆ 8 ತಿಂಗಳುಗಳ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿದರು ಹಾಗೂ ತಾತ್ಕಾಲಿಕ ಪ್ರಮಾಣಪತ್ರವನ್ನು ನೀಡುವಂತೆ ಸ್ವತಂತ್ರ ಇಂಜಿನಿಯರ್‌ರವರನ್ನು ಕೋರಿದರು (16.11.2017). ಸ್ವತಂತ್ರ ಇಂಜಿನಿಯರ್, ರಿಯಾಯಿತಿದಾರರು ಹಾಗೂ ಪ್ರಾಧಿಕಾರದ ಪ್ರತಿನಿಧಿಯವರು ಸುರಕ್ಷತಾ ಲೆಕ್ಕಪರಿಶೋಧನೆಯೂ ಒಳಗೊಂಡಂತೆ ಎಲ್ಲಾ ಅಗತ್ಯವಿರುವ ಪರೀಕ್ಷಣೆಗಳನ್ನು ಜಂಟಿಯಾಗಿ ನಡೆಸಿದರು.

- ಪೂರ್ಣಗೊಳಿಸಲಾಗಿರುವ ಹೆದ್ದಾರಿಯಲ್ಲಿ ಸ್ವತಂತ್ರ ಇಂಜಿನಿಯರ್‌ರವರು ನಡೆಸಲಾದ ಪರೀಕ್ಷಣೆಗಳ ಆಧಾರದ ಮೇರೆಗೆ ನಿರ್ಧಾರಣೆ ಮಾಡಲಾಗುವ ದಿನಾಂಕವು ತಾತ್ಕಾಲಿಕವಾಗಿ ಪೂರ್ಣಗೊಂಡಿರುವಿಕೆಯ ದಿನಾಂಕವಾಗಿರುತ್ತದೆ. ವಾಣಿಜ್ಯ ಕಾರ್ಯಾಚರಣೆ ದಿನಾಂಕದ ಉದ್ದೇಶಕ್ಕಾಗಿ ಮುಂಚಿನ ದಿನಾಂಕದೊಂದಿಗೆ ಪಿಸಿಸಿ ನೀಡುವ ಸಲುವಾಗಿ ಸ್ವತಂತ್ರ ಇಂಜಿನಿಯರ್‌ರವರಿಗೆ ಒಪ್ಪಿಗೆ ನೀಡುವ ಮೊದಲು ತಕ್ಕುದಾದಂತಹ ಕಾರ್ಯವಿಧಾನಗಳನ್ನು ಅನುಸರಿಸಲಾಗಿರುವುದು.

ಈ ಕೆಳಗಿನ ಅಂಶಗಳ ಕಾರಣ ಉತ್ತರವು ಒಪ್ಪುವಂತಿಲ್ಲ:

- ಪ್ರಾಧಿಕಾರವು ನಿರ್ದಿಷ್ಟ ದಿನಾಂಕಕ್ಕೆ ಮುಂಚಿತವಾಗಿ ಯೋಜನೆಯನ್ನು ಪೂರ್ಣಗೊಳಿಸುವ ಯೋಜನೆಯನ್ನು ಮಾಡಿರಲಿಲ್ಲ ಮತ್ತು ಆದ್ದರಿಂದ ಮೂಲತಃ ನಿರ್ದಿಷ್ಟಪಡಿಸಲಾಗಿದ್ದಂತಹ ಮೈಲಿಗಲ್ಲುಗಳನ್ನು ಬದಲಾವಣೆಗೊಳಿಸಿರಲಿಲ್ಲ.

- ರಿಯಾಯಿತಿ ಒಡಂಬಡಿಕೆಯ ಅನುಸಾರ, ಸುರಕ್ಷತಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವ ಸಲುವಾಗಿ, ಸಮಾಲೋಚಕರನ್ನು ನೇಮಕ ಮಾಡುವುದು ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಗಮನಿಸಲಾಗಿರುವ ಅಂಶಗಳಿಗೆ ರಿಯಾಯಿತಿದಾರರು ಅನುಪಾಲನಾ ಕ್ರಮಗಳನ್ನು ಕೈಗೊಂಡನಂತರವಷ್ಟೇ ತಾತ್ಕಾಲಿಕ ಪ್ರಮಾಣಪತ್ರವನ್ನು ನೀಡತಕ್ಕದ್ದು. ರಿಯಾಯಿತಿದಾರರುಗಳು ನಡೆಸಿದಂತಹ ಸುರಕ್ಷತಾ ಲೆಕ್ಕಪರಿಶೋಧನೆಯನ್ನು ರಿಯಾಯಿತಿ ಒಡಂಬಡಿಕೆಯ ಕಲಮು 14.1.2ರ ಅನುವುಗಳ ಅನುಸಾರ ಮಾನ್ಯತೆ ಹೊಂದಿದೆ ಎಂಬುದಾಗಿ ಪರಿಗಣಿಸಲು ಸಾಧ್ಯವಿರುವುದಿಲ್ಲ.

- ರಿಯಾಯಿತಿ ಒಡಂಬಡಿಕೆಯ ಅನುಸಾರ, ಸ್ವತಂತ್ರ ಇಂಜಿನಿಯರುಗಳು ನೀಡುವ ತಾತ್ಕಾಲಿಕ ಪ್ರಮಾಣಪತ್ರದ ದಿನಾಂಕವು ಒಂದು ಮಾನದಂಡವಾಗಿರುತ್ತದೆ ಹಾಗೂ ಒಂದು ಪೂರ್ವಾನ್ವಯ ದಿನಾಂಕದ ವಾಣಿಜ್ಯ ಕಾರ್ಯಾಚರಣೆ ದಿನಾಂಕವನ್ನು ಪೂರ್ವಾನ್ವಯ ಜಾರಿಯೊಂದಿಗೆ ಪರಿಗಣಿಸಲು ರಿಯಾಯಿತಿ ಒಡಂಬಡಿಕೆಯಲ್ಲಿ ಅನುವುಗಳು ಇರಲಿಲ್ಲ. ಈ ರೀತಿಯಾಗಿ, ವಾಣಿಜ್ಯ ಕಾರ್ಯಾಚರಣೆ ದಿನಾಂಕಕ್ಕಾಗಿ ಒಂದು ಪೂರ್ವಾನ್ವಯ ದಿನಾಂಕದೊಂದಿಗೆ ತಾತ್ಕಾಲಿಕ ಪ್ರಮಾಣಪತ್ರದ ನೀಡಿಕೆಗಾಗಿ ಒಪ್ಪಿಗೆಯನ್ನು ನೀಡಿದ್ದು ಒಪ್ಪಿಕೊಳ್ಳುವಂತಹ ಕ್ರಮವಾಗಿರಲಿಲ್ಲ ಹಾಗೂ ಭಾಗಶಃ ಪೂರ್ಣಗೊಂಡಿದ್ದ ಯೋಜನೆಗಳಲ್ಲಿ ಬೋನಸ್ ಪಾವತಿಯು ಉಚಿತ ಕ್ರಮವಾಗಿರಲಿಲ್ಲ.

ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿರುವುದು (ಆಗಸ್ಟ್ 2021); ಅವರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ.

**ಬೆಂಗಳೂರು** **(ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)**

**ದಿನಾಂಕ** **ಮಹಾಲೇಖಪಾಲರು (ಲೆಕ್ಕಪರಿಶೋಧನೆ–II)**

**ಕರ್ನಾಟಕ**

**ಮೇಲು ರುಜು ಮಾಡಲಾಗಿದೆ**

**ನವದೆಹಲಿ** **(ಗಿರೀಶ್ ಚಂದ್ರ ಮುರ್ಮು)**

**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**